# ಶಾಲಾಪೂರ್ವ ಶಿಕ್ಷಣದ ಮೌಲ್ಯಮಾಪನ ಮಾರ್ಗಸೂಚಿ
# 2016



ಅಕ್ಷರ ಫೌಂಡೇಶನ್ ಸಂಶೋಧನೆ ಮತ್ತು ಮೌಲ್ಯಮಾಪನ ವಿಭಾಗ – 2016

# ಪರಿಚಯ

ಅಂಗನವಾಡಿಗಳಲ್ಲಿ ಶಾಲಾಪೂರ್ವ ಶಿಕ್ಷಣದ ಸೇವೆಯು ಪ್ರಮುಖವಾದ ಸೇವೆಯಾಗಿರುತ್ತದೆ. ಈ ಸೇವೆಯಲ್ಲಿ 2 ವರ್ಷದಿಂದ 6 ವರ್ಷದವರೆಗಿನ ಮಕ್ಕಳು ಶಾಲಾಪೂರ್ವ ಶಿಕ್ಷಣದ ಫಲಾನುಭವಿಗಳಾಗಿದ್ದು, ಅವರಿಗೆ ಅವರ ವಯಸ್ಸಿಗನುಗುಣವಾಗಿ ಕೌಶಲಗಳನ್ನು ಮತ್ತು ಚಟುವಟಿಕೆಗಳನ್ನು ನಡೆಸಿದರೆ ಹೆಚ್ಚು ಪರಿಣಾಮಕಾರಿಯಾಗುವುದೆಂದು ಮನಗೊಂಡು, ಕೇಂದ್ರಕ್ಕೆ ಬರುವ ಮಕ್ಕಳನ್ನು 2 ರಿಂದ 4 ವರ್ಷ ವಯಸ್ಸಿನ ಚಿಕ್ಕ ಮಕ್ಕಳ ಗುಂಪು ಹಾಗೂ 4 ರಿಂದ 6 ವರ್ಷ ವಯಸ್ಸಿನ ಮಕ್ಕಳ ದೊಡ್ಡ ಗುಂಪುಗಳನ್ನಾಗಿ ವಿಂಗಡಿಸಿ, ಚಿಕ್ಕ ಮಕ್ಕಳ ಗುಂಪಿಗೆ ಸ್ವ-ಸಹಾಯ, ಕೌಶಲಾಧಾರಿತ ಚಟುವಟಿಕೆಗಳು ಮತ್ತು ಶಿಕ್ಷಣ ಪೂರ್ವ ಕಲಿಕೆ ಹಾಗೂ ದೊಡ್ಡ ಮಕ್ಕಳಿಗಾಗಿ ಶಾಲಾ ಸಿದ್ಧತೆ ಚಟುವಟಿಕಗಳ ಮೂಲಕ ಮಕ್ಕಳನ್ನು ಮುಂದಿನ ಶಿಕ್ಷಣಕ್ಕೆ ಸಿದ್ಧಗೊಳಿಸುವುದು ನಮ್ಮ ಯೋಜನೆಯಾಗಿರುತ್ತದೆ.

**2 ರಿಂದ 4 ವರ್ಷದ ಮಕ್ಕಳ ಗುಂಪು**

ಅಂಗನವಾಡಿಗೆ ಬರುವ ಎಲ್ಲಾ 2 ರಿಂದ 4 ವರ್ಷದ ಮಕ್ಕಳಿಗೆ ಅವರವರ ಕಲಿಕಾ ಮಾಪನಕ್ಕಾಗಿ ಕಲಿಕಾ ಧ್ಯೇಯಗಳನ್ನಾಧರಿಸಿ ಮೌಲ್ಯಮಾಪನ ಮಾಡುವುದು. ಅದಕ್ಕಾಗಿ ಈ ಮಾರ್ಗಸೂಚಿಯನ್ನು ಉಪಯೋಗಿಸಬಹುದು. ಪ್ರತಿಯೊಂದು ಕೌಶಲಾಧಾರಿತ, ಮೌಲ್ಯಮಾಪನಕ್ಕೆ ಮಾರ್ಗಸೂಚಿಯಲ್ಲಿ ಕೊಟ್ಟ ವಿವರಗಳನ್ನು ಒಂದು ಮಾದರಿಯಾಗಿ ಪರಿಗಣಿಸಿ, ಅಗತ್ಯವಿದ್ದಾಗ ಮಾತ್ರ ಅದನ್ನಾಧರಿಸಿ ಮೌಲ್ಯಮಾಪನ ಯೋಜಿಸಬೇಕು. ಆದ್ದರಿಂದ ಪ್ರತೀ ಚಟುವಟಿಕೆಗೂ ಅಗತ್ಯವಿರುವಂತಹ ಪೂರ್ವಭಾವಿ ಕೌಶಲಗಳನ್ನಾಧರಿಸಿ ಮೌಲ್ಯಮಾಪನಗಳ ಪಟ್ಟಿ ಮಾಡಲಾಗಿದೆ.

**ಈ ಮಾರ್ಗಸೂಚಿಯ ವ್ಯಾಪ್ತಿಯಲ್ಲಿ ಬರುವಂತಹ ಕೌಶಲ ಕ್ಷೇತ್ರಗಳು:**

1. ಸಾಮನ್ಯ ಅರಿವು
2. ಸ್ಥೂಲಚಲನೆಯ ಕೌಶಲಗಳು
3. ಸೂಕ್ಷ್ಮ ಚಲನೆಯ ಕೌಶಲಗಳು
    - ಸ್ವ-ಸಹಾಯ ಕೌಶಲಗಳು
    - ಕೈ-ಚಳಕ ಬಳಕೆಯ ಕೌಶಲಗಳು
4. ಭಾಷಾ ಬೆಳವಣಿಗೆ
5. ಗ್ರಹಣ ಶಕ್ತಿ ಬೆಳವಣಿಗೆ
6. ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆ
7. ಶಿಕ್ಷಣ ಪೂರ್ವ ಗಣಿತ

**ಮೌಲ್ಯಮಾಪಕರಿಗೆ ಸೂಚನೆಗಳು**

**ಮೌಲ್ಯಮಾಪನಕ್ಕೆ ಮುನ್ನ:**

- ಮೌಲ್ಯಮಾನಕ್ಕೆ ಅನುಕೂಲವಾಗುವಂತೆ ಮಕ್ಕಳನ್ನು 2–4 ಮತ್ತು 4–6 ವಯಸ್ಸಿಗನುಗುಣವಾಗುವಂತೆ ಎರಡು ಗುಂಪುಗಳಾಗಿ ವಿಂಗಡಿಸಿ
- ಹೇಗೆ ಮೌಲ್ಯಮಾಪನ ಮಾಡಬೇಕೆಂದು ಯೋಜನೆ ರೂಪಿಸಿಕೊಳ್ಳುವುದು
- ತಮ್ಮಲ್ಲಿರುವ ಪಟ್ಟಿಯಲ್ಲಿ ಎಷ್ಟು ಮಕ್ಕಳು ಹಾಜರಿರುವರೆಂದು ಪರಿಶೀಲಿಸಿ ಪೆನ್ಸಿಲ್‌ನಿಂದ ಗುರುತು ಹಾಕಿಕೊಳ್ಳುವುದು
- ಮೌಲ್ಯಮಾಪನಕ್ಕೆ ಒಳಪಡುವ ಪ್ರತೀ ಮಕ್ಕಳ ವಿವರ (ಹೆಸರಿಗನುಗುಣವಾಗಿ) ಪರಿಶೀಲಿಸಿಕೊಳ್ಳುವುದು
- ಮೌಲ್ಯಮಾಪನ ಮಾಡುವ ಮೊದಲು ಎಲ್ಲಾ ಸಾಮಗ್ರಿಗಳು ಇವೆಯೇ? ಎಂದು ಖಚಿತಪಡಿಸಿಕೊಳ್ಳಿ
- ಮೌಲ್ಯಮಾಪನದ ಮೇಲ್ಭಾಗದಲ್ಲಿರುವ ಎಲ್ಲಾ ಮಾಹಿತಿಯನ್ನು ಭರ್ತಿಗೊಳಿಸಬೇಕು.
- ಮೌಲ್ಯ ಮಾಪಕರು ತಾವು ಮೌಲ್ಯಮಾಪನ ಮಾಡಲಿರುವ ಉತ್ತರ ಪತ್ರಿಕೆಯನ್ನು ಸರಿಯಾಗಿ ಜೋಡಿಸಿರಬೇಕು. ಇದರಿಂದ ಮೌಲ್ಯಮಾಪನ ಮುಗಿದ ನಂತರ ಅದನ್ನು ಪುನರ್ ಪರಿಶೀಲಿಸಲು ಅನುಕೂಲವಾಗುತ್ತದೆ.
- ಅಕ್ಷರ ಫೌಂಡೇಶನ್ ನೀಡಿರುವ ಬೋಧನೆ ಮತ್ತು ಕಲಿಕಾ ಸಾಮಗ್ರಿಗಳನ್ನು ಬಳಸುವುದು.
- ಮೌಲ್ಯಮಾಪನದ ಕೈಪಿಡಿಯನ್ನು ಸಂಪೂರ್ಣವಾಗಿ ಓದುವುದು.
- ಮಕ್ಕಳಿಗೆ ಮೌಲ್ಯಮಾಪನ ಮಾಡುವ ಮುನ್ನ ನಿಮ್ಮ ಸಹೋದ್ಯೋಗಿಗಳೊಂದಿಗೆ ಈ ಎಲ್ಲಾ ಚಟುವಟಿಕೆಗಳನ್ನು ಅಭ್ಯಾಸ ಮಾಡುವುದು.

**ಮೌಲ್ಯಮಾಪನದ ಸಮಯದಲ್ಲಿ:**

- ಮಗುವಿನೊಂದಿಗೆ ಸ್ನೇಹದಿಂದ ವರ್ತಿಸಿ ಮಗುವಿಗೆ ಆಟದ ವಾತಾವರಣ ನಿರ್ಮಿಸಿ ನಂತರ ಮೌಲ್ಯಮಾಪನವನ್ನು ಆರಂಭಿಸುವುದು.
- ಮೌಲ್ಯಮಾಪನ ಕ್ರಮವನ್ನು ತಪ್ಪದೆ ಪಾಲಿಸುವುದು
- ಮೌಲ್ಯಮಾಪನ ಪ್ರತೀ ಸೂಚ್ಯಂಕದ ಅಂಕಪಟ್ಟಿ ಕೆಳಗೆ ಮಗುವಿನ ಫಲಿತಾಂಶ ನಮೂದಿಸಿ. (ಉದಾ: ಸರಿ=1, ತಪ್ಪು=0, ಮಗು ಉತ್ತರಿಸದೇ ಇದ್ದಲ್ಲಿ=ಎನ್.ಎ.) ಎಂದು ಪ್ರತೀ ವಿಷಯದ ಮುಂದೆ ಮೌಲ್ಯಾಂಕ ಗುರುತಿಸುವುದು.
- ಮಗುವಿಗೆ ಯಾವುದೇ ಪ್ರಶ್ನೆ ಕೇಳುವಾಗ ಹೆಚ್ಚಿನ ಸೂಚನೆಗಳನ್ನು ಕೊಡಬಾರದು, ಪ್ರಶ್ನೆಯಲ್ಲಿರುವಷ್ಟು ಸೂಚನೆಗಳನ್ನು ಮಾತ್ರ ನೀಡತಕ್ಕದ್ದು ಮತ್ತು ಯಾವುದೇ ಕ್ರಿಯೆಯ ಮೂಲಕ, ಸಂಜ್ಞೆಯ ಮೂಲಕ ಸಹಾಯ ಮಾಡಬಾರದು.
- ಮಗು ತಪ್ಪು ಉತ್ತರ ಕೊಟ್ಟಾಗ ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸಬಾರದು, ತಪ್ಪು ಉತ್ತರ ಕೂಡ ಅಧ್ಯಯನಕ್ಕೆ ಬಹಳ ಮುಖ್ಯವಾಗಿರುತ್ತದೆ.
- ಮಾಹಿತಿಗಳು ಹೊಂದಾಣಿಕೆಯಾಗದಿದ್ದರೆ ಅಥವಾ ಅಪೂರ್ಣವಾಗಿದ್ದಲ್ಲಿ ಅದನ್ನು ಪರಿಶೀಲಿಸಿ ಭರ್ತಿ ಮಾಡಬೇಕು.
- ಮೌಲ್ಯಮಾಪಕರು ಸಂಭವನೀಯ ಉತ್ತರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಮೌಲ್ಯಮಾಪನ ಮಾಡಬೇಕು ಅಥವಾ ಅಂಕಗಳನ್ನು ನೀಡಬೇಕು. (ಅಗತ್ಯವಿದ್ದಲ್ಲಿ ಅಕ್ಷರ ಫೌಂಡೇಶನ್ ಕಲಿಕಾ –ಬೋಧನಾ ಕೈಪಿಡಿಯನ್ನು ಬಳಸಿ)
- ಪ್ರತಿಯೊಂದು ಉತ್ತರಕ್ಕೂ ಅಂಕಗಳನ್ನು ಕೆಳಭಾಗದಲ್ಲಿರುವ ಚೌಕದೊಳಗೆ ಪೆನ್ಸಿಲ್ ನಿಂದ ದಾಖಲಿಸಿ (ಪ್ರತಿಯೊಂದು ಪ್ರಶ್ನೆಗೂ ಅಂಕ ನೀಡಬೇಕು)
- ಮೌಲ್ಯಮಾಪಕರು ಉತ್ತರ ಪತ್ರಿಕೆಯಲ್ಲಿ ಬರೆದಿರುವ ಪ್ರತಿಯೊಂದು ಉತ್ತರವನ್ನು ಹಾಗೂ ಮೌಲ್ಯಮಾಪನ ಮಾಡಿರುವುದನ್ನು ಖಚಿತ ಪಡಿಸಿಕೊಳ್ಳಬೇಕು.
- ಮೌಲ್ಯಮಾಪನ ಮುಗಿದ ನಂತರ ಮೌಲ್ಯಾಂಕ ಪಟ್ಟಿಯಲ್ಲಿ ಮೌಲ್ಯಮಾಪಕರು ತಮ್ಮ ಹೆಸರು ಮತ್ತು ದಿನಾಂಕವನ್ನು ಬರೆಯಬೇಕು
- ಉತ್ತರ ಪತ್ರಿಕೆಯಲ್ಲಿರುವ ಅಂಕಗಳನ್ನು ಮೌಲ್ಯಾಂಕ ಪಟ್ಟಿಯಲ್ಲಿರುವ ಆಯಾ ಮಗುವಿನ ಹೆಸರಿನ ಮುಂದಿರುವ ಸಾಲಿನಲ್ಲಿ ಭರ್ತಿ ಮಾಡುವುದು
- ಮೌಲ್ಯಾಂಕ ಪಟ್ಟಿಯಲ್ಲಿ ಅಂಕವನ್ನು ಭರ್ತಿಮಾಡಿದ ನಂತರ ಎರಡು ಸಾರಿ ಮರುಪರಿಶೀಲಿಸಿ, ಮುಂದಿನ ಮಗುವಿನ ಮೌಲ್ಯಮಾಪನ ಶುರು ಮಾಡುವುದು.
- **ಯಾವುದೇ ಮಗು ಅಸ್ವಸ್ಥತೆ/ಅನಾರೋಗ್ಯದಿಂದ ಇದ್ದಲ್ಲಿ, ಅಥವಾ ಅಸಮಧಾನದ (ಇಷ್ಟವಿಲ್ಲದ) ಸ್ಥಿತಿಯಲ್ಲಿದ್ದಾಗ ಮೌಲ್ಯಮಾಪನ ಮಾಡಬಾರದು.**

ಮೌಲ್ಯಮಾಪನದ ನಂತರ

- ಈ ಮಾಹಿತಿಯನ್ನು ಭರ್ತಿ ಮಾಡಿ ಯೋಜನಾ ಸಂಯೋಜಕರಿಗೆ ಮಾಹಿತಿ ತಲುಪಿಸುವುದು.

## ಚಟುವಟಿಕೆ ಆಧಾರಿತ ಮೌಲ್ಯಮಾಪನ ನಕ್ಷೆ

## 2 ರಿಂದ 4 ವರ್ಷದ ವರೆಗಿನ ಮಕ್ಕಳ ಮೌಲ್ಯಮಾಪನ (ಕಾರ್ಯಕರ್ತೆಯರ ಪ್ರತಿ)

**ಸಾಮಾನ್ಯ ಅರಿವು**

| ಕ್ರ.ಸಂ | ವಿಂಗಡಣೆ ಮತ್ತು ಚಟುವಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 1 | ಮಗು ತನ್ನ ಹೆಸರು ಹೇಳುತ್ತದೆಯೇ | ಮೌಖಿಕವಾಗಿ | ನಿನ್ನ ಹೆಸರು ಏನು? ಎಂದು ಮಗುವನ್ನು ಕೇಳಿ | ಪೂರ್ತಿ ಹೆಸರು ಹೇಳಬೇಕು. ಉದಾ:ಮಗುವಿನ ಹೆಸರು ರಮಾ ಎ.ಕೆ. ಎಂದಿದ್ದರೆ, ರಮಾ ಎಂದು ಹೇಳಿದರೆ ಸಾಕು. | ಹೌದು=1 ಇಲ್ಲ=0 |
| 2 | ತಾಯಿಯ ಹೆಸರು ಹೇಳುತ್ತದೆಯೇ | ಮೌಖಿಕವಾಗಿ | ನಿನ್ನ ತಾಯಿಯ ಹೆಸರೇನು? | ತಾಯಿಯ ಪೂರ್ತಿ ಹೆಸರು ಹೇಳಬೇಕು. ಮೇಲಿನ ಉದಾಹರಣೆಯ ರೀತಿ. | ಹೌದು=1 ಇಲ್ಲ=0 |
| 3 | ತಂದೆಯ ಹೆಸರು ಹೇಳುತ್ತದೆಯೇ | ಮೌಖಿಕವಾಗಿ | ನಿನ್ನ ತಂದೆಯ ಹೆಸರೇನು? | ತಂದೆಯ ಪೂರ್ತಿ ಹೆಸರು ಹೇಳಬೇಕು. ಮೇಲಿನ ಉದಾಹರಣೆಯ ರೀತಿ. | ಹೌದು=1 ಇಲ್ಲ=0 |
| 4 | ಕಾರ್ಯಕರ್ತೆಯ ಹೆಸರು ಹೇಳುತ್ತದೆಯೇ | ಮೌಖಿಕವಾಗಿ | ನಿನ್ನ ಶಿಕ್ಷಕಿಯ/ಟೀಚರ್/ಮಿಸ್ ಹೆಸರೇನು? ಎಂದು ಕೇಳಿ | ಕಾರ್ಯಕರ್ತೆಯ ಪೂರ್ತಿ ಹೆಸರು ಹೇಳಬೇಕು. ಮೇಲಿನ ಉದಾಹರಣೆಯ ರೀತಿ | ಹೌದು=1 ಇಲ್ಲ=0 |
| 5 | ತನ್ನ ಹಳ್ಳಿ ಅಥವಾ ಏರಿಯಾ ಹೆಸರು ಹೇಳುತ್ತದೆಯೇ | ಮೌಖಿಕವಾಗಿ | ನಿನ್ನ ಹಳ್ಳಿ/ಏರಿಯಾ ಹೆಸರೇನು? | ಹಳ್ಳಿ/ಏರಿಯಾದ ಪೂರ್ತಿ ಹೆಸರು ಹೇಳಬೇಕು. | ಹೌದು=1 ಇಲ್ಲ=0 |
| 6 | ಅಣ್ಣ ಅಥವಾ ಅಕ್ಕನ ಹೆಸರು ಹೇಳುತ್ತದೆಯೇ? | ಮೌಖಿಕವಾಗಿ | ನಿನ್ನ ಅಣ್ಣ ಅಥವಾ ಅಕ್ಕನ ಹೆಸರೇನು? | ಅಣ್ಣ/ಅಕ್ಕನ ಪೂರ್ತಿ ಹೆಸರು ಹೇಳಬೇಕು. ಮೇಲಿನ ಉದಾಹರಣೆಯ ರೀತಿ | ಹೌದು=1 ಇಲ್ಲ=0 |

**ಸ್ಥೂಲ ಚಲನೆಯ ಕೌಶಲಗಳು:**

| ಕ್ರ.ಸಂ | ವಿಂಗಡಣೆ ಮತ್ತು ಚಟುವಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 7 | ಮಗು ಬೀಳದೆ ನಡೆಯುವುದು | --------- | ಕಾರ್ಯಕರ್ತೆ ಗಮನಿಸಿ ಅಂಕ ಕೊಡುವುದು | ಮಗು ಬೀಳದೆ ಸರಿಯಾದ ಹೆಜ್ಜೆಗಳನ್ನಿಟ್ಟು ನಡೆಯಬೇಕು | ಹೌದು=1, ಇಲ್ಲ=0 |
| 8 | ಮಗು ಬೀಳದೆ ಓಡುವುದು | --------- | ಕಾರ್ಯಕರ್ತೆ ಗಮನಿಸಿ ಅಂಕ ಕೊಡುವುದು | ಮಗು ಒಮ್ಮೆಯೂ ಬೀಳದೆ ಸರಿಯಾಗಿ ಓಡಬೇಕು | ಹೌದು=1, ಇಲ್ಲ=0 |
| 9 | ಜಿಗಿಯುವುದು (3 ಬಾರಿ ಜಿಗಿಯುವುದು ಗುಂಪು ಚಟುವಟಿಕೆ) | ಜಿಗಿಯುವ ಹಗ್ಗ | ಜಿಗಿಯುವ ಹಗ್ಗವನ್ನು ಭೂಮಿಯಿಂದ 10 ಇಂಚು ಮೇಲೆ ಹಿಡಿದು ಮಗುವನ್ನು ಹಗ್ಗದ ಮೇಲೆ ಜಿಗಿಯಲು ಹೇಳಿ. (3 ಬಾರಿ) | ಮಗು ಹಗ್ಗದ ಮೇಲೆ ಜಿಗಿಯಬೇಕು. | ಜಿಗಿದರೆ=1, ಜಿಗಿಯದಿದ್ದರೆ=0 |
| 10 | ಚೆಂಡನ್ನು ಒದೆಯುವುದು (ಗುಂಪು ಚಟುವಟಿಕೆ) | ಚೆಂಡು | ಚೆಂಡನ್ನು ಮಗು ಕಾಲಿನಿಂದ ಒದೆಯಲು ಹೇಳಿ | ಮಗು ಚೆಂಡನ್ನು ಕಾಲಿನಿಂದ ಒದೆಯಬೇಕು | ಚೆಂಡನ್ನು ಒದ್ದರೆ=1, ಒದೆಯದಿದ್ದರೆ=0 |
| 11 | ನೇರವಾದ ಗೆರೆಯ ಮೇಲೆ ನಡೆಯುವುದು (ಗುಂಪು ಚಟುವಟಿಕೆ) | ಚಾಕ್‌ಪೀಸ್ | ಚಾಕ್ ಪೀಸ್ ನಿಂದ ದಪ್ಪವಾದ, ನೇರವಾದ 15 ಅಡಿ ಗೆರೆಯನ್ನು ನೆಲದ ಮೇಲೆ ಬರೆಯಿರಿ. ಮಗು ಹೆಜ್ಜೆಯನ್ನು ತಪ್ಪಿಸದೆ ನೇರವಾದ ಗೆರೆಯ ಮೇಲೆ ನಡೆಯುವಂತೆ ತಿಳಿಸಿ. | ಮಗು ಒಂದು ಬಾರಿಯೂ ಹೆಜ್ಜೆಯನ್ನು ತಪ್ಪಿಸದೆ ಗೆರೆಯ ಮೇಲೆ ನಡೆಯಬೇಕು | ನಡೆದರೆ=1, ನಡೆಯದೆ ಇದ್ದರೆ=0 |

**ಸೂಕ್ಷ್ಮ ಚಲನೆಯ ಕೌಶಲಗಳು:**

**ಸ್ವ-ಸಹಾಯ ಕೌಶಲಗಳು:**

| ಕ್ರ.ಸಂ | ವಿಂಗಡಣೆ ಮತ್ತು ಚಟುವಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 12 | ಮಗು ಯಾರ ಸಹಾಯವಿಲ್ಲದೆ ತನ್ನ ಊಟ ನಾನೆ ತಿನ್ನುತ್ತಾಳೆ/ನೆ. (ಅಂಗನವಾಡಿ ಕಾರ್ಯಕರ್ತೆಯ ಗಮನಿಸುವಿಕೆ) | --- | ಪ್ರತೀ ಮಗುವನ್ನು ಗಮನಿಸಿ ಕಾರ್ಯಕರ್ತೆ ಅಂಕ ಕೊಡುವುದು | ಗಮನಿಸಿದಾಗ ಮಗು ಯಾರ ಸಹಾಯವಿಲ್ಲದೆ ತನ್ನ ಊಟ ತಾನೆ ತಿನ್ನಬೇಕು | ಹೌದು=1, ಇಲ್ಲ=0 |

**ಕೈ-ಚಳಕ ಬಳಕೆ ಕೌಶಲಗಳು**

| ಕ್ರ.ಸಂ | ವಿಂಗಡಣೆ ಮತ್ತು ಚಟುವಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 13 | ಬಾಟಲ್‌ಗಳ ಮುಚ್ಚಳವನ್ನು ಹಾಕುವುದು – ತೆಗೆಯುವುದು | ವಿವಿಧ ಗಾತ್ರದ ಖಾಲಿ ನೀರಿನ ಬಾಟಲ್ ಗಳು ಮತ್ತು ಮುಚ್ಚಳಗಳು | ಬಾಟಲ್‌ಗಳು ಮತ್ತು ಮುಚ್ಚಗಳನ್ನು ಮಗುವಿನ ಮುಂದೆ ಇಟ್ಟು, ಬಾಟಲ್‌ಗೆ ಮುಚ್ಚಳವನ್ನು ಹಾಕುವೆಯಾ ಎಂದು ಮಗುವನ್ನು ಕೇಳುವುದು. | ಬಾಟಲ್‌ನ ಗಾತ್ರಕ್ಕೆ ಸರಿಯಾಗಿ ಹೊಂದುವ ಮುಚ್ಚಳವನ್ನು ಹಾಕಿ ತೆಗೆಯಬೇಕು | ಹಾಕಿ ತೆಗೆದರೆ=1, ಇಲ್ಲದಿದ್ದರೆ=0 |
| 14 | ನೀರನ್ನು ಸುರಿಯುವುದು | ಒಂದು ಖಾಲಿ ಲೋಟ, ಒಂದು ನೀರು ತುಂಬಿದ ಲೋಟ | ಮಗುವಿಗೆ ಹೇಳಿ ಖಾಲಿ ಲೋಟಕ್ಕೆ ಇನ್ನೊಂದು ಲೋಟದಲ್ಲಿರುವ ನೀರನ್ನು ಚೆಲ್ಲದೆ ಸುರಿಯುವೆಯಾ? ಎಂದು ಮಗುವನ್ನು ಕೇಳುವುದು. | ಚೆಲ್ಲದೆ ಸುರಿಯುವುದು | ಚೆಲ್ಲದೆ ಸುರಿದರೆ =1, ಚಲ್ಲಿದರೆ=0 |
| 15 | 3 ಬೆರಳಿನಿಂದ ಸಣ್ಣ ವಸ್ತುಗಳನ್ನು ಎತ್ತಿ ಬಟ್ಟಲಲ್ಲಿ ಹಾಕುವುದು (ತ್ರಿಪದಿ) | ಮಣಿಗಳು, ಸಣ್ಣ-ಸಣ್ಣ ಕಲ್ಲುಗಳು, ಬೀಜಗಳು, ಇತ್ಯಾದಿ ಮತ್ತು ಬಟ್ಟಲು, | ಮಗುವಿಗೆ ಸಣ್ಣ ಸಣ್ಣ ವಸ್ತುಗಳನ್ನು ಮಗುವಿನ ಮುಂದೆ ಇಡಬೇಕು. ಮಗುವಿಗೆ ಆ ವಸ್ತುಗಳನ್ನು 3 ಬೆರಳಿನಲ್ಲಿ (ತ್ರಿಪದಿ) ಹಿಡಿದು ಬಟ್ಟಲಲ್ಲಿ ಹಾಕುವೆಯಾ ಎಂದು ಕೇಳುವುದು. | ಮಗು ತ್ರಿಪದಿಯಲ್ಲಿ ಸಣ್ಣ ಸಣ್ಣ ವಸ್ತುಗಳನ್ನು ಹಿಡಿದು ಬಟ್ಟಲಲ್ಲಿ ಹಾಕಬೇಕು | ತ್ರಿಪದಿಯಲ್ಲಿ ಹಿಡಿದು ಹಾಕಿದರೆ =1, ಇಲ್ಲದಿದ್ದರೆ=0 |
| 16 | ಗೋಪುರ ನಿರ್ಮಾಣ (5 ಘನಾಕೃತಿಗಳು ಅಥವಾ ಖಾಲಿ ಬೆಂಕಿಪೊಟ್ಟಣಗಳು) | 5 ಘನಾಕೃತಿಗಳು ಅಥವಾ ಖಾಲಿ ಬೆಂಕಿಪೊಟ್ಟಣಗಳು | ಎಲ್ಲಾ ಘನಾಕೃತಿ/ಖಾಲಿ ಬೆಂಕಿಪೊಟ್ಟಣಗಳನ್ನು ಮಗುವಿನ ಮುಂದೆ ಚೆಲ್ಲಿ ನೀನು ಇವುಗಳನ್ನು ಒಂದರ ಮೇಲೆ ಒಂದರಂತೆ ಜೋಡಿಸುವೆಯಾ? ಎಂದು ಕೇಳಿ. | 5 ಘನಾಕೃತಿ/ ಖಾಲಿ ಬೆಂಕಿಪೊಟ್ಟಣಗಳನ್ನು ಸರಿಯಾಗಿ ಜೋಡಿಸಬೇಕು | ಹೌದು=1, ಇಲ್ಲ=0 |
| 17 | ಕ್ರಯಾನ್ಸ್‌ನ್ನು ತ್ರಿಪದಿಯಲ್ಲಿ ಹಿಡಿದು ಬಣ್ಣ ಹಾಕುವುದು | ಕ್ರಯಾನ್ಸ್ ಅಥವಾ ಸೀಮೆಸುಣ್ಣ | ನೆಲದ ಮೇಲೆ/ಚಟುವಟಿಕೆ ಹಾಳೆಯ ಮೇಲೆ ಯಾವುದಾದರೊಂದು ಆಕಾರ ಬರೆದು ಅದರೊಳಗೆ ಬಣ್ಣ ಹಾಕುವೆಯಾ ಎಂದು ಮಗುವಿಗೆ ಕೇಳಬೇಕು. | ಮಗು ತ್ರಿಪದಿಯಲ್ಲಿ ಸರಿಯಾಗಿ ಹಿಡಿದು ಬಣ್ಣ ಹಾಕಬೇಕು (ಆಕಾರದೊಳಗೆ ಸರಿಯಾಗಿ ಬಣ್ಣ ಹಾಕದಿದ್ದರೂ ಸರಿ) | ತ್ರಿಪದಿಯಲ್ಲಿ ಹಿಡಿದರೆ=1, ಹಿಡಿಯದಿದ್ದರೆ=0 |

ಕ್ರಿಯಾತ್ಮಕ ಚಟುವಟಿಕೆ:

| ಕ್ರ.ಸಂ | ವಿಂಗಡಣೆ ಮತ್ತು ಚಟುಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 18 | ಚಿತ್ರಕಲೆ–ಕಲೆಯಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಾರೆ | ------- | ಪ್ರತೀ ಮಗುವನ್ನು ಕಾರ್ಯಕರ್ತೆ ಗಮನಿಸಿ ಅಂಕ ಕೊಡುವುದು | ಮಕ್ಕಳು ತಾವೇ ಆಸಕ್ತಿಯಿಂದ ಚಟುವಟಿಕೆಯಲ್ಲಿ ಭಾಗವಹಿಸುತ್ತಾರೆ. | ಮಗು ಆಸಕ್ತಿಯಿಂದ ಭಾಗವಹಿಸಿದರೆ=1, ಕಾರ್ಯಕರ್ತೆಯ ಒತ್ತಾಯದಿಂದ ಭಾಗವಹಿಸಿದರೆ=0 |
| 19 | ಸಂಗೀತ ನೃತ್ಯದಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಾರೆ | ------- | ಪ್ರತೀ ಮಗುವನ್ನು ಕಾರ್ಯಕರ್ತೆ ಗಮನಿಸಿ ಅಂಕ ಕೊಡುವುದು | ಮಕ್ಕಳು ತಾವೇ ಆಸಕ್ತಿಯಿಂದ ಚಟುವಟಿಕೆಯಲ್ಲಿ ಭಾಗವಹಿಸುತ್ತಾರೆ. | |

ಗ್ರಹಣ ಶಕ್ತಿ ಬೆಳವಣಿಗೆ:

| ಕ್ರ.ಸಂ | ವಿಂಗಡಣೆ ಮತ್ತು ಚಟುವಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 20 | ಪ್ರಾಥಮಿಕ ಬಣ್ಣಗಳನ್ನು ಹೊಂದಿಸುವುದು (ಚಟುವಟಿಕೆಯ ಮುಖಾಂತರ) | ಕೆಂಪು, ನೀಲಿ, ಹಳದಿ ಬಣ್ಣದ ವಸ್ತುಗಳು | 3 ಬಣ್ಣದ ವಸ್ತುಗಳನ್ನು ಬೆರೆಸಿ ಮಗುವಿನ ಮುಂದೆ ಇಡುವುದು. ಮಗುವಿಗೆ ಯಾವುದಾದರೂ ಒಂದು ಬಣ್ಣದ ವಸ್ತುವನ್ನು ತೋರಿಸಿ ಅದೇ ಬಣ್ಣದ ವಸ್ತುವನ್ನು ತೆಗೆದು ಕೊಡುವಂತೆ ಹೇಳುವುದು. ಹಾಗೆ 3 ಬಣ್ಣಗಳ ಮಾದರಿ ತೋರಿಸಿ ಮೇಲಿನಂತೆ ಕೇಳಿ | ಮಗು ಬಣ್ಣಗಳನ್ನು ಹೊಂದಿಸಬೇಕು | ಸರಿಯಾಗಿ ಹೊಂದಿಸಿದರೆ=1, ಹೊಂದಿಸದಿದ್ದರೆ=0 |
| 21 | ಆಕಾರಗಳನ್ನು ಹೊಂದಿಸುವುದು (ಚಟುವಟಿಕೆಯ ಮುಖಾಂತರ) | 3 ವೃತ್ತಗಳು, 3 ತ್ರಿಭುಜಗಳು, 3 ಚೌಕಾಕಾರದ ಆಕಾರಗಳನ್ನು ಕೆ.ಜಿ.ಶೀಟ್ ನಿಂದ ಕತ್ತರಿಸಿ ಇಟ್ಟುಕೊಳ್ಳುವುದು. | 3 ಆಕಾರಗಳನ್ನು ಬೆರೆಸಿ ಮಗುವಿನ ಮುಂದೆ ಇಡುವುದು. ಮಗುವಿಗೆ ಯಾವುದಾದರೂ ಒಂದು ಆಕಾರವನ್ನು ತೋರಿಸಿ ಅದೇ ಅಕಾರವನ್ನು ತೆಗೆದು ಕೊಡುವಂತೆ ಹೇಳುವುದು. ಹಾಗೆ 3 ಆಕಾರಗಳ ಮಾದರಿ ತೋರಿಸಿ ಮೇಲಿನಂತೆ ಕೇಳಿ. | ಮಗು ಆಕಾರಗಳನ್ನು ಹೊಂದಿಸಬೇಕು | ಸರಿಯಾಗಿ ಹೊಂದಿಸಿದರೆ=1, ಹೊಂದಿಸದಿದ್ದರೆ=0 |
| 22 | ಬಣ್ಣಗಳನ್ನು ಬೇರ್ಪಡಿಸುವುದು (ಚಟುವಟಿಕೆಯ ಮುಖಾಂತರ) | ಕೆಂಪು, ನೀಲಿ, ಹಳದಿ ಬಣ್ಣದ ವಸ್ತುಗಳು | 3 ಬಣ್ಣದ ವಸ್ತುಗಳನ್ನು ಮಗುವಿನ ಮುಂದೆ ಹರಡಿ. ಪ್ರತೀ ಬಣ್ಣಗಳನ್ನು ಬೇರ್ಪಡಿಸಲು ಹೇಳಿ. | ಮಗು ಬಣ್ಣಗಳನ್ನು ಬೇರ್ಪಡಿಸಬೇಕು | ಬೇರ್ಪಡಿಸಿದರೆ=1, ಬೇರ್ಪಡಿಸದಿದ್ದರೆ=0 |
| 23 | ಆಕಾರಗಳನ್ನು ಬೇರ್ಪಡಿಸುವುದು. (ಚಟುವಟಿಕೆಯ ಮುಖಾಂತರ) | 3 ವೃತ್ತಗಳು, 3 ತ್ರಿಭುಜಗಳು, 3 ಚೌಕಾಕಾರದ ಆಕಾರಗಳನ್ನು ಕೆ.ಜಿ.ಶೀಟ್ ನಿಂದ ಕತ್ತರಿಸಿ ಇಟ್ಟುಕೊಳ್ಳುವುದು. | 3 ಆಕಾರಗಳನ್ನು ಬೆರೆಸಿ ಮಗುವಿನ ಮುಂದೆ ಹರಡಿ. 3 ಆಕಾರಗಳನ್ನು ಬೇರ್ಪಡಿಸಲು ಹೇಳಿ | ಮಗು 3 ಆಕಾರಗಳನ್ನು ಬೇರ್ಪಡಿಸಬೇಕು | ಬೇರ್ಪಡಿಸಿದರೆ=1, ಬೇರ್ಪಡಿಸದಿದ್ದರೆ=0 |
| 24 | ಕನಿಷ್ಠ 3 ಸಂಖ್ಯೆಗಳು ಅಥವಾ ವಸ್ತುಗಳ ಹೆಸರನ್ನು ಪುನರುಚ್ಛರಿಸುವುದು | ಮೌಖಿಕವಾಗಿ | ಯಾವುದಾದರೂ 3 ಸಂಖ್ಯೆಗಳು ಅಥವಾ 3 ವಸ್ತುಗಳ ಹೆಸರನ್ನು ಮಗುವಿಗೆ ಹೇಳಿ ಅದನ್ನು ಪುನರುಚ್ಛರಿಸುವಂತೆ ಹೇಳಬೇಕು. ಉದಾ: 4, 6, 3. ಅಥವಾ ಪೆನ್ನು, ಬ್ಯಾಗ್, ಬಸ್ ಇತ್ಯಾದಿ | ಮಗು ಕಾರ್ಯಕರ್ತೆ ಹೇಳಿದನ್ನು ಪುನರುಚ್ಛರಿಸಬೇಕು | ಅದೇ ಕ್ರಮದಲ್ಲಿ ಹೇಳಿದರೆ=1, ಹೇಳದಿದ್ದರೆ=0 |
| 25 | ಹಗಲು – ರಾತ್ರಿ ವ್ಯತ್ಯಾಸ ಗುರುತಿಸುವುದು | ಮೌಖಿಕವಾಗಿ | ಮಗುವಿಗೆ ಸೂರ್ಯ ಯಾವಾಗ ಕಾಣಿಸುತ್ತಾನೆ? ಚಂದ್ರ ಯಾವಾಗ ಕಾಣಿಸುತ್ತಾನೆ ಎಂದು ಕೇಳುವುದು ಅಥವಾ ಮಗುವಿಗೆ ಹೊರಗೆ ನೋಡಲು ಹೇಳಿ ಈಗ ಹಗಲು ಇದೆಯಾ/ರಾತ್ರಿ ಇದೆಯಾ ಎಂದು ಮಗುವನ್ನು ಕೇಳಿ | ಮಗು ಹಗಲು/ಬೆಳಗ್ಗೆ ಎಂದು ಹೇಳಬೇಕು | ಹೇಳಿದರೆ=1, ಹೇಳದಿದ್ದರೆ=0 |
| 26 | ಮಾದರಿಯನ್ನು ಕ್ರಮವಾಗಿ ಮುಂದುವರೆಸುವುದು | 5 ಎಲೆ, 5 ಕಲ್ಲು, | ಮಗುವಿನ ಮುಂದೆ ಎಲೆ, ಕಲ್ಲು, ಎಲೆ, ಹೀಗೆ ಒಂದಾದ ನಂತರ ಒಂದನ್ನು ಜೋಡಿಸಿ ಕೊನೆಯ ವಸ್ತುವನ್ನು ಜೋಡಿಸದೆ ಖಾಲಿ ಬಿಡಿ ಆ ಮುಂದಿನ ಜೋಡಣೆಯನ್ನು ಮುಂದುವರೆಸಲು ಮಗುವಿಗೆ ತಿಳಿಸಬೇಕು, | ಮಗು ಸರಿಯಾದ ಮಾದರಿಯಲ್ಲಿ ಜೋಡಿಸಬೇಕು | ಮಾದರಿಯನ್ನು ಮುಂದುವರೆಸಿದರೆ=1 ಮುಂದುವರೆಸದಿದ್ದರೆ =0 |

## ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆ

| ಕ್ರ.ಸಂ | ವಿಂಗಡಣೆ ಮತ್ತು ಚಟುವಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 27 | ಮಗು ಅಳದೆ ಕೇಂದ್ರಕ್ಕೆ ಬರುತ್ತಾರೆ | --------- | ಪ್ರತೀ ಮಗುವನ್ನು ಗಮನಿಸಿ ಕಾರ್ಯಕರ್ತೆ ಅಂಕ ಕೊಡುವುದು | ಶೇ 75% ರಷ್ಟು ಮಗು ಅಳದೇ ಕೇಂದ್ರಕ್ಕೆ ಬರುತ್ತಾಳೆ/ನೆ | ಹೌದು=1, ಇಲ್ಲ=0 |
| 28 | ಮಗು ಕೇಂದ್ರದ ವೇಳಾಪಟ್ಟಿಯನ್ನು ಪಾಲಿಸುತ್ತಾನೆ/ಳೆ | --------- | ಪ್ರತೀ ಮಗುವನ್ನು ಗಮನಿಸಿ ಕಾರ್ಯಕರ್ತೆ ಅಂಕ ಕೊಡುವುದು | ಊಟದ ಸಮಯ, ಆಟದ ಸಮಯ, ಮನೆಗೆ ಹೋಗುವ ಸಮಯವನ್ನು ಮಗು ಗುರುತಿಸುತ್ತಾಳೆ/ನೆ (ಯಾವುದಾದರು ಒಂದು) | ಹೌದು=1 ಇಲ್ಲ=0 |
| 29 | ಮಗು ಭಾವನೆಗಳನ್ನು ವ್ಯಕ್ತ ಪಡಿಸುತ್ತಾನೆ/ಳೆ | --------- | ಪ್ರತೀ ಮಗುವನ್ನು ಗಮನಿಸಿ ಕಾರ್ಯಕರ್ತೆ ಅಂಕ ಕೊಡುವುದು | ಮಗು ತನ್ನ ಭಾವನೆಗಳನ್ನು ವ್ಯಕ್ತಪಡಿಸಬೇಕು. | ಹೌದು= 1 ಇಲ್ಲ=0 |
| 30 | ಮಗು ಸ್ನೇಹಿತರೊಂದಿಗೆ ಆಡುತ್ತಾನೆ/ಳೆ | --------- | ಪ್ರತೀ ಮಗುವನ್ನು ಗಮನಿಸಿ ಕಾರ್ಯಕರ್ತೆ ಅಂಕ ಕೊಡುವುದು | ಮಗು ತನ್ನ ಸ್ನೇಹಿತರೊಂದಿಗೆ ಆಡಬೇಕು | ಹೌದು=1 ಇಲ್ಲ=0 |
| 31 | ಮಗು ಚಟುವಟಿಕೆಗಳಲ್ಲಿ ಭಾಗವಹಿಸುತ್ತಾನೆ/ಳೆ | --------- | ಪ್ರತೀ ಮಗುವನ್ನು ಗಮನಿಸಿ ಕಾರ್ಯಕರ್ತೆ ಅಂಕ ಕೊಡುವುದು | ಮಗು ಯಾವುದಾದರೂ ಒಂದು ಚಟುವಟಿಕೆಯಲ್ಲಿ ಸ್ವತಃ ತಾನೇ ಭಾಗವಹಿಸಬೇಕು | ಹೌದು=1 ಇಲ್ಲ=0 |
| 32 | ಮಗು ಕೇಂದ್ರದ ನಿಯಮಗಳನ್ನು ಪಾಲಿಸುತ್ತಾನೆ/ಳೆ | --------- | ಪ್ರತೀ ಮಗುವನ್ನು ಗಮನಿಸಿ ಕಾರ್ಯಕರ್ತೆ ಅಂಕ ಕೊಡುವುದು | ಮಗು ಕೇಂದ್ರದ ನಿಯಮಗಳನ್ನು ಪಾಲಿಸಬೇಕು. ಉದಾಃ ಚಪ್ಪಲಿಗಳನ್ನು ಸಾಲಾಗಿ ಬಿಡುವುದು, ಚಾಪೆ ತೆಗೆದುಕೊಳ್ಳುವುದು. | ಹೌದು=1 ಇಲ್ಲ=0 |
| 33 | ಮಗು ಕೇಂದ್ರಕ್ಕೆ ಬರುವಾಗ ಮತ್ತು ಹೋಗುವಾಗ ಕಾರ್ಯಕರ್ತೆಗೆ ಅಭಿನಂದಿಸುತ್ತಾನೆ/ಳೆ | --------- | ಪ್ರತೀ ಮಗುವನ್ನು ಗಮನಿಸಿ ಕಾರ್ಯಕರ್ತೆ ಅಂಕ ಕೊಡುವುದು | ಮಗು ಕಾರ್ಯಕರ್ತೆಗೆ ಪ್ರತೀ ದಿನ ಅಭಿನಂದಿಸಬೇಕು | ಹೌದು=1 ಇಲ್ಲ=0 |
| 34 | ಮಗು ಕೇಂದ್ರಕ್ಕೆ ಸ್ವಚ್ಛತೆಯಿಂದ ಬರುತ್ತಾಳೆ/ನೆ | --------- | ಪ್ರತೀ ಮಗುವನ್ನು ಗಮನಿಸಿ ಕಾರ್ಯಕರ್ತೆ ಅಂಕ ಕೊಡುವುದು | ಮಗು ಕೇಂದ್ರಕ್ಕೆ ಸ್ವಚ್ಛತೆಯಿಂದ ಬರಬೇಕು | ಹೌದು=1 ಇಲ್ಲ=0 |
| 35 | ಮಗು ಸಮಯಕ್ಕೆ ಸರಿಯಾಗಿ ಬರುತ್ತಾಳೆ/ನೆ | --------- | ಪ್ರತೀ ಮಗುವನ್ನು ಗಮನಿಸಿ ಕಾರ್ಯಕರ್ತೆ ಅಂಕ ಕೊಡುವುದು | ಮಗು ಸಮಯಕ್ಕೆ ಸರಿಯಾಗಿ ಬರಬೇಕು | ಹೌದು=1 ಇಲ್ಲ=0 |
| 36 | ಮಗು ಇತರ ಮಕ್ಕಳೊಂದಿಗೆ ಹೊಂದಿಕೊಳ್ಳುತ್ತಾನೆ/ಳೆ | -------- | ಪ್ರತೀ ಮಗುವನ್ನು ಗಮನಿಸಿ ಕಾರ್ಯಕರ್ತೆ ಅಂಕ ಕೊಡುವುದು | ಮಗು ಇತರ ಮಕ್ಕಳೊಂದಿಗೆ ಹೊಂದಿಕೊಳ್ಳಬೇಕು | ಹೌದು=1 ಇಲ್ಲ=0 |

ಅನುಕೂಲಕಾರರ ಪ್ರತಿ: (2–4)

**ಭಾಷಾ ಬೆಳವಣಿಗೆ**

| ಕ್ರ.ಸಂ | ವಿಂಗಡಣೆ ಮತ್ತು ಚಟುವಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 37 | 3 ಪದಗಳ ವಾಕ್ಯ ಮಾಡುವುದು | ಮೌಖಿಕವಾಗಿ | ನಿನ್ನ ಸ್ನೇಹಿತನ ಹೆಸರು ಏನು?<br>ಈ ದಿನ ನೀನು ಯಾವ ಆಟ ಆಡಿದೆ?<br>ಬೆಳಗ್ಗೆ ನೀನು ಏನು ತಿಂದೆ? ಎಂದು ಕಾರ್ಯಕರ್ತೆ ಮಗುವಿಗೆ ಕೇಳುವುದು.<br>ಮಗು ಯಾವುದಾದರೂ ಒಂದು ಪ್ರಶ್ನೆಗೆ 3 ಪದಗಳಲ್ಲಿ ಉತ್ತರ ಹೇಳುವಂತೆ ಹೇಳಿ | 3 ಪದಗಳಲ್ಲಿ ವಾಕ್ಯ ಮಾಡಬೇಕು | ಮಾಡಿದರೆ=1,<br>ಇಲ್ಲದಿದ್ದರೆ=0 |
| 38 | 2 ಸೂಚನೆಗಳನ್ನು ಪಾಲಿಸುವುದು | ಮೌಖಿಕವಾಗಿ | ಮಕ್ಕಳಿಗೆ ಯಾವುದಾದರೂ ಸೂಚನೆಗಳನ್ನು ನೀಡುವುದು. ಉದಾ: ನಿನ್ನ ಪುಸ್ತಕವನ್ನು ತೆಗೆದುಕೊಂಡು ನಿನ್ನ ಗೆಳತಿಗೆ/ಗೆಳೆಯನಿಗೆ ಕೊಡು<br>ಎದ್ದು ನಿಂತು ಒಂದು ಬಾರಿ ಚಪ್ಪಾಳೆ ಹಾಕು. ಎಂದು ಹೇಳಿ | ಮಗು ಕಾರ್ಯಕರ್ತೆ ಹೇಳಿದಂತೆ ಪಾಲಿಸಬೇಕು | ಪಾಲಿಸಿದರೆ=1,<br>ಪಾಲಿಸದಿದ್ದರೆ=0 |
| 39 | ಶಿಶು ಗೀತೆಯನ್ನು ಹೇಳುವುದು (2 ರಿಂದ 4 ಸಾಲು) | ಮೌಖಿಕವಾಗಿ | ಯಾವುದಾದರು ಒಂದು ಶಿಶುಗೀತೆಯನ್ನು ಹೇಳಿಸುವುದು | ಯಾವುದಾದರು ಒಂದು ಶಿಶುಗೀತೆ (2–4 ಸಾಲು) ಹೇಳಬೇಕು | ಹೇಳಿದರೆ=1,<br>ಹೇಳದಿದ್ದರೆ=0 |
| 40 | 3 ಕ್ರಿಯೆಗಳನ್ನು ಗುರುತಿಸುವುದು | --------- | ಮಗುವಿನ ಮುಂದೆ ನಡೆಯುವುದು, ಬರೆಯುವುದು, ತಿನ್ನುವ ಕ್ರಿಯೆಗಳನ್ನು ಮಾಡಿ ತೋರಿಸಿ "ನಾನು ಏನುಮಾಡುತ್ತಿರುವೆ" ಎಂದು ಮಗುವಿಗೆ ಕೇಳಿ. | ಎಲ್ಲಾ ಕ್ರಿಯೆಗಳನ್ನು ಸರಿಯಾಗಿ ಗುರುತಿಸಬೇಕು (ಪುನರಾವರ್ತಿಸಬಾರದು) | 3=1, 3ಕ್ಕಿಂತ ಕಡಿಮೆ=0 |
| 41 | ದೇಹದ ಅಂಗಾಂಗಳನ್ನು ಗುರುತಿಸುವುದು. (ತಲೆ,ಕಣ್ಣು, ಕೈ, ಕಾಲು, ಹೊಟ್ಟೆ). | ನಿಮ್ಮ ದೇಹದ ಅಂಗಗಳನ್ನು ತೋರಿಸಿ | ನಿಮ್ಮ ದೇಹದ ಅಂಗಗಳನ್ನು ತೋರಿಸಿ (ತಲೆ, ಕಣ್ಣು, ಕೈ, ಕಾಲು, ಹೊಟ್ಟೆ) ಅವುಗಳ ಹೆಸರನ್ನು ಹೇಳಲು ಹೇಳಿ. | ಸ್ಥೂಲ ಶರೀರದ ಭಾಗಗಳ ಪರಿಚಯ | 5=1, 5ಕ್ಕಿಂತ ಕಡಿಮೆ=0 |
| 42 | ಮಗು ಮೇಲೆ–ಕೆಳಗೆ ತೋರಿಸುವುದು | ----------- | ಮಗುವಿನ ಕೈಗಳನ್ನು ಮೇಲೆ ಎತ್ತಲು ಹಾಗೂ ಕೆಳಗೆ ಇಳಿಸಲು ಹೇಳಿ | ಮೇಲೆ ಮತ್ತು ಕೆಳಗೆ ಸ್ಥಾನ ಸರಿಯಾಗಿ ಮಾಡಬೇಕು | ಮಾಡಿದರೆ=1,<br>ಮಾಡದಿದ್ದರೆ=0 |
| 43 | ಮಗು ಒಳಗೆ–ಹೊರಗೆ ತೋರಿಸುವುದು | ಖಾಲಿ ಕವರ್ ಅಥವಾ ಡಬ್ಬಿ. ಮತ್ತು ಚಾಕ್‌ಪೀಸ್/ ಸೀಮೆಸುಣ್ಣ | 1.ಮಗುವಿಗೆ ಹೇಳಿ ಸೀಮೆಸುಣ್ಣವನ್ನು ಈ ಕವರ್ ಅಥವಾ ಡಬ್ಬಿಯ ಒಳಗೆ ಹಾಕು.<br>2. ಮಗುವಿಗೆ ಹೇಳಿ ಸೀಮೆಸುಣ್ಣವನ್ನು ಹೊರಗೆ ತೆಗಿ | 2 ಕ್ರಿಯೆಯನ್ನು ಮಗು ಸರಿಯಾಗಿ ಮಾಡಬೇಕು. | ಮಾಡಿದರೆ =1,<br>ಮಾಡದಿದ್ದರೆ=0 |
| 44 | ಪ್ರಾಥಮಿಕ ಬಣ್ಣಗಳನ್ನು ಗುರುತಿಸುವುದು (ಕೆಂಪು, ನೀಲಿ, ಹಳದಿ) | ಪ್ರಾಥಮಿಕ ಬಣ್ಣಗಳು (ಕೆಂಪು, ನೀಲಿ, ಹಳದಿ) | 3 ಬಣ್ಣಗಳ ವಸ್ತುಗಳನ್ನು ಅಥವಾ ಕ್ರಯಾನ್ಸ್‌ನ್ನು ಒಂದಾದ ನಂತರ ಒಂದರಂತೆ ತೋರಿಸಿ ಇದು ಯಾವ ಬಣ್ಣ ಎಂದು ಮಗುವನ್ನು ಕೇಳಿ | 3 ಬಣ್ಣಗಳನ್ನು ಗುರುತಿಸಬೇಕು | 3=1, 3ಕ್ಕಿಂತ ಕಡಿಮೆ=0 |
| 45 | ಮೂಲ ಆಕಾರ ಹೆಸರು ಹೇಳುವುದು (ವೃತ್ತ, ತ್ರಿಭುಜ, ಚೌಕ) | ಆಕಾರಗಳು (ವೃತ್ತ, ಚೌಕ, ತ್ರಿಭುಜ) | 3 ಆಕಾರಗಳನ್ನು ಒಂದಾದ ನಂತರ ಒಂದರಂತೆ ತೋರಿಸಿ ಇದು ಯಾವ ಆಕಾರ ಎಂದು ಮಗುವನ್ನು ಕೇಳಿ | 3 ಆಕಾರಗಳನ್ನು ಗುರುತಿಸಬೇಕು | 3=1, 3ಕ್ಕಿಂತ ಕಡಿಮೆ=0 |
| 46 | 5 ತರಕಾರಿಗಳನ್ನು ಹೆಸರಿಸುವುದು | ತರಕಾರಿಗಳ ಮಿಂಚುಪಟ್ಟಿಗಳು/ಚಾರ್ಟ್ಸ್/ ಸಂಬಂದಪಟ್ಟ | ಮಿಂಚುಪಟ್ಟಿಗಳನ್ನು ಮಕ್ಕಳಿಗೆ ತೋರಿಸಿ ಅದನ್ನು ಗುರುತಿಸಲು ಹೇಳುವುದು, ಮಕ್ಕಳು ಚಿತ್ರದಲ್ಲಿ ಕಾಣುವ ತರಕಾರಿಗಳ ಹೆಸರು ಹೇಳಲು ಹೇಳಿ | ಮಗು 5 ತರಕಾರಿಗಳ ಹೆಸರನ್ನು ಹೇಳಬೇಕು | 3ಕ್ಕಿಂತ ಜಾಸ್ತಿ ಹೇಳಿದರೆ=1, 3ಕ್ಕಿಂತ ಕಡಿಮೆ–0 |

| | | | | | |
|---|---|---|---|---|---|
| | | ಸಾಮಗ್ರಿಗಳನ್ನು ಉಪಯೋಗಿಸಿ. | | | |
| 47 | 5 ಹಣ್ಣುಗಳನ್ನು ಹೆಸರಿಸುವುದು | ಹಣ್ಣುಗಳ ಮಿಂಚುಪಟ್ಟಿಗಳು/ ಚಾರ್ಟ್ಸ್/ಸಂಬಂದಪಟ್ಟ ಸಾಮಗ್ರಿಗಳನ್ನು ಉಪಯೋಗಿಸಿ | ಮಿಂಚುಪಟ್ಟಿಗಳನ್ನು ಮಕ್ಕಳಿಗೆ ತೋರಿಸಿ ಅದನ್ನು ಗುರುತಿಸಲು ಹೇಳುವುದು, ಮಕ್ಕಳು ಚಿತ್ರದಲ್ಲಿ ಕಾಣುವ ಹಣ್ಣುಗಳ ಹೆಸರು ಹೇಳಲು ಹೇಳಿ | ಮಗು 5 ಹಣ್ಣುಗಳ ಹೆಸರನ್ನು ಹೇಳಬೇಕು | 3ಕ್ಕಿಂತ ಜಾಸ್ತಿ ಹೇಳಿದರೆ=1, 3ಕ್ಕಿಂತ ಕಡಿಮೆ–0 |
| 48 | ವಾರದ ಹೆಸರುಗಳನ್ನು ಕ್ರಮಬದ್ಧವಾಗಿ ಹೇಳುವುದು | ಮೌಖಿಕವಾಗಿ | ಮಗುವಿಗೆ ವಾರದ ಹೆಸರನ್ನು ಕ್ರಮಬದ್ಧವಾಗಿ ಹೇಳುವಂತೆ ತಿಳಿಸಿ | ವಾರದ ಹೆಸರುಗಳನ್ನು ಮಗು ಕ್ರಮಬದ್ಧವಾಗಿ ಹೇಳಬೇಕು | ಸರಿಯಾದ ಕ್ರಮದಲ್ಲಿ ಹೇಳಿದರೆ=1, ಹೇಳದಿದ್ದರೆ=0 |

**ಶಿಕ್ಷಣ ಪೂರ್ವ ಗಣಿತ**

| ಕ್ರ.ಸಂ | ವಿಂಗಡಣೆ ಮತ್ತು ಚಟುವಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 49 | ಮಗು 1 ರಿಂದ 10 ರವರೆಗಿನ ಸಂಖ್ಯೆ ಹೇಳುವುದು | ಮೌಖಿಕವಾಗಿ | ನಿನಗೆ 1, 2, 3 ಸಂಖ್ಯೆಗಳು ಗೊತ್ತಾ? ಹಾಗದರೆ ಹೇಳು ಎಂದು ಮಗುವಿಗೆ ಕೇಳಿ, 1 ರಿಂದ 10 ರವರೆಗೆ ಸಂಖ್ಯೆಗಳನ್ನು ಹೇಳಿಸಿ. | ಕ್ರಮಬದ್ದವಾಗಿ ಎಲ್ಲಾ ಸಂಖ್ಯೆಗಳನ್ನು ಹೇಳಬೇಕು | ಹೇಳಿದರೆ=1, ಹೇಳದಿದ್ದರೆ=0 |
| 50 | ಮಗು ದೊಡ್ಡದು–ಚಿಕ್ಕದು ಗುರುತಿಸುವುದು | ದೊಡ್ಡ ಗಾತ್ರದ ಕಲ್ಲು, ಚಿಕ್ಕ ಕಲ್ಲು, ದೊಡ್ಡ ಪೆನ್ಸಿಲ್, ಚಿಕ್ಕ ಪೆನ್ಸಿಲ್. ಇತ್ಯಾದಿ | ಇವುಗಳಲ್ಲಿ ಯಾವುದು ದೊಡ್ಡದು? ಯಾವುದು ಚಿಕ್ಕದು ಎಂದು ಮಗುವನ್ನು ಕೇಳಿ. | ಸರಿಯಾಗಿ ಗುರುತಿಸಿ ಹೇಳಬೇಕು | ಗುರುತಿಸಿದರೆ=1, ಗುರುತಿಸದಿದ್ದರೆ=0 |
| 51 | ಮಗು ಹೆಚ್ಚು ಕಡಿಮೆ ಹೇಳುವುದು | ಹುಣಸೆಬೀಜ/ ಕಲ್ಲು/ ಬೀಜಗಳು/ಸಣ್ಣ ಚಾಕ್ ಪೀಸ್/ ಕಾಗದದ ಚೂರುಗಳು ಇತ್ಯಾದಿ | ನೆಲದ ಮೇಲೆ ಒಂದು ಕಡೆ ಹೆಚ್ಚು ವಸ್ತುಗಳನ್ನು, ಇನ್ನೊಂದು ಕಡೆ ಕಡಿಮೆ ವಸ್ತುಗಳನ್ನು ಹಾಕಿ ಮಗುವನ್ನು ಯಾವುದು ಹೆಚ್ಚು, ಯಾವುದು ಕಡಿಮೆ ಎಂದು ಕೇಳಿ (ಉದಾ: 4 ವಸ್ತುಗಳನ್ನು ಒಂದು ಕಡೆ ಹಾಕಿ, 9 ವಸ್ತುಗಳನ್ನು ಇನ್ನೊಂದು ಕಡೆ ಹಾಕಿ) | ಮಗು ಸರಿಯಾಗಿ ತೋರಿಸಬೇಕು. | ಹೌದು=1, ಇಲ್ಲ=0 |
| 52 | ಮಗು ಹತ್ತಿರ–ದೂರ ಗುರುತಿಸುವುದು | ಮೌಖಿಕವಾಗಿ | ಉದಾ: ನನ್ನ ಹತ್ತಿರ ಯಾರು ಕುಳಿತಿದ್ದಾರೆ? ನನ್ನಿಂದ ದೂರ ಯಾರಿದ್ದಾರೆ? ಎಂದು ಮಗುವನ್ನು ಕೇಳಿ. | ಸರಿಯಾಗಿ ಹೇಳಬೇಕು | ಗುರುತಿಸಿದರೆ=1, ಗುರುತಿಸದಿದ್ದರೆ=0 |

# ಪರಿಚಯ

**4 ರಿಂದ 6 ವರ್ಷ ಮೇಲ್ಪಟ್ಟ ಎಲ್ಲಾ ಮಕ್ಕಳಿಗೆ**

ಅಂಗನವಾಡಿಗೆ ಬರುವ 4 ರಿಂದ 6 ವರ್ಷದ ಎಲ್ಲಾ ಮಕ್ಕಳಿಗೆ ಅವರವರ ಕಲಿಕಾ ಮಾಪನಕ್ಕಾಗಿ ಕಲಿಕಾ ಧ್ಯೇಯಗಳನ್ನಾಧರಿಸಿ ಮೌಲ್ಯಮಾಪನವನ್ನು ರೂಪಿಸಲಾಗಿದೆ, ಅದಕ್ಕಾಗಿ ಈ ಮಾರ್ಗಸೂಚಿಯನ್ನು ಉಪಯೋಗಿಸಬಹುದು. ಪ್ರತಿಯೊಂದು ಕೌಶಲಾಧಾರಿತ, ಮೌಲ್ಯಮಾಪನಕ್ಕೆ ಮಾರ್ಗಸೂಚಿಯಲ್ಲಿ ಕೊಟ್ಟ ವಿವರಗಳನ್ನು ಒಂದು ಮಾದರಿಯಾಗಿ ಪರಿಗಣಿಸಿ, ಅಗತ್ಯವಿದ್ದಾಗ ಮಾತ್ರ ಅದನ್ನಾಧರಿಸಿ ಮೌಲ್ಯಮಾಪನ ಯೋಜಿಸಬೇಕು. ಆದ್ದರಿಂದ, ಪ್ರತೀಚಟುವಟಿಕೆಗೂ ಅಗತ್ಯವಿರುವಂತಹ ಪೂರ್ವಭಾವಿ ಕೌಶಲಗಳನ್ನಾಧರಿಸಿ ಮೌಲ್ಯಮಾಪನಗಳ ಪಟ್ಟಿ ಮಾಡಲಾಗಿದೆ.

**ಈ ಮಾರ್ಗಸೂಚಿಯ ವ್ಯಾಪ್ತಿಯಲ್ಲಿ ಬರುವಂತಹ ಕೌಶಲ ಕ್ಷೇತ್ರಗಳು:**

1. ಸಾಮಾನ್ಯ ಅರಿವು
2. ಸ್ಥೂಲ ಚಲನೆ
3. ಸೂಕ್ಷ್ಮ ಚಲನೆ
4. ಭಾಷೆಯ ಬೆಳವಣಿಗೆ
5. ಗ್ರಹಣ ಶಕ್ತಿ ಬೆಳವಣಿಗೆ
6. ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆ
7. ಶಿಕ್ಷಣ ಪೂರ್ವ ಓದುವುದು
8. ಶಿಕ್ಷಣ ಪೂರ್ವ ಬರೆಯುವುದು
9. ಶಿಕ್ಷಣ ಪೂರ್ವ ಗಣಿತ

# ಚಟುವಟಿಕೆ ಆಧಾರಿತ ಮೌಲ್ಯಮಾಪನ ನಕ್ಷೆ

## 4 ರಿಂದ 6 ವರ್ಷದ ಮಕ್ಕಳ ಮೌಲ್ಯಮಾಪನ (ಕಾರ್ಯಕರ್ತೆಯರ ಪ್ರತಿ)

**ಸಾಮಾನ್ಯ ಅರಿವು**

| ಕ್ರ.ಸಂ | ವಿಂಗಡಣೆ ಮತ್ತು ಚಟುವಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 1 | ಮಗು ತನ್ನ ಪೂರ್ತಿ ಹೆಸರು ಹೇಳುತ್ತದೆಯೇ | ಮೌಖಿಕವಾಗಿ | ನಿನ್ನ ಹೆಸರು ಏನು? ಎಂದು ಮಗುವನ್ನು ಕೇಳಿ | ಮಗುವಿನ ಪೂರ್ತಿ ಹೆಸರು ಹೇಳಬೇಕು. ಉದಾ: ಮಗುವಿನ ಹೆಸರು ರಮಾ ಎ.ಕೆ. ಎಂದಿದ್ದರೆ, ರಮಾ ಎ.ಕೆ. ಎಂದು ಹೇಳಬೇಕು. | ಹೌದು=1<br>ಇಲ್ಲ=0 |
| 2 | ಮಗು ತನ್ನ ವಯಸ್ಸು ಹೇಳುತ್ತದೆಯೇ | ಮೌಖಿಕವಾಗಿ | ನಿನ್ನ ವಯಸ್ಸು ಎಷ್ಟು? | ಹೆಚ್ಚು–ಕಡಿಮೆ ಸರಿಯಾದ ವಯಸ್ಸು ಹೇಳುವುದು | ಹೌದು=1<br>ಇಲ್ಲ=0 |
| 3 | ನಿನ್ನ ಅಂಗನವಾಡಿಯ ಹೆಸರೇನು? | ಮೌಖಿಕವಾಗಿ | ನಿನ್ನ ಅಂಗನವಾಡಿಯ ಹೆಸರೇನು? ಎಂದು ಮಗುವನ್ನು ಕೇಳಿ | ಮಗು ಅಂಗನವಾಡಿ ಕೇಂದ್ರದ ಹೆಸರನ್ನು ಸರಿಯಾಗಿ ಹೇಳಬೇಕು. ಉದಾ: ಅಂಗನವಾಡಿ ಕೇಂದ್ರ, ಕಸ್ತೂರಿನಗರ ಎಂದು ಹೇಳಬೇಕು. | ಸರಿಯಾಗಿ ಹೇಳಿದರೆ=1,<br>ಇಲ್ಲದಿದ್ದರೆ=0 |
| 4 | ನೀನು ಹುಡುಗನಾ? | ಮೌಖಿಕವಾಗಿ | ನೀನು ಹುಡುಗನಾ ಎಂದು ಮಗುವನ್ನು ಕೇಳಿ | ಹೌದು ಅಥವಾ ನಾನು ಹುಡುಗ ಎಂದು ಮಗು ಹೇಳಬೇಕು | ಸರಿಯಾಗಿ ಹೇಳಿದರೆ=1<br>ಇಲ್ಲದಿದ್ದರೆ=0 |
| 5 | ನೀನು ಹುಡುಗಿಯಾ? | ಮೌಖಿಕವಾಗಿ | ನೀನು ಹುಡುಗಿಯಾ ಎಂದು ಮಗುವನ್ನು ಕೇಳಿ | ಹೌದು ಅಥವಾ ನಾನು ಹುಡುಗಿ ಎಂದು ಮಗು ಹೇಳಬೇಕು | ಸರಿಯಾಗಿ ಹೇಳಿದರೆ=1,<br>ಇಲ್ಲದಿದ್ದರೆ=0 |
| 6 | ನಮ್ಮ ರಾಜ್ಯ ಯಾವುದು | ಮೌಖಿಕವಾಗಿ | ನಮ್ಮ ರಾಜ್ಯ ಯಾವುದು ಎಂದು ಮಗುವನ್ನು ಕೇಳಿ | ಮಗು ನಮ್ಮ ರಾಜ್ಯದ ಹೆಸರು ಹೇಳಬೇಕು | ಸರಿಯಾಗಿ ಹೇಳಿದರೆ=1,<br>ಇಲ್ಲದಿದ್ದರೆ=0 |
| 7 | ನಮ್ಮ ದೇಶ ಯಾವುದು | ಮೌಖಿಕವಾಗಿ | ನಮ್ಮ ದೇಶ ಯಾವುದು ಎಂದು ಮಗುವನ್ನು ಕೇಳಿ | ಮಗು ನಮ್ಮ ದೇಶದ ಹೆಸರು ಹೆಳಬೇಕು | ಸರಿಯಾಗಿ ಹೇಳಿದರೆ=1 |
| 8 | ಕುಟುಂಬ ಸದಸ್ಯರ ದೂರವಾಣಿ ಸಂಖ್ಯೆ ಅಥವಾ ಮನೆ ವಿಳಾಸ | ಮೌಖಿಕವಾಗಿ | ನಿಮ್ಮ ಕುಟುಂಬದ ಸದಸ್ಯರ ದೂರವಾಣಿ ಸಂಖ್ಯೆ ಅಥವಾ ಮನೆ ವಿಳಾಸ ಯಾವುದಾದರು ಒಂದನ್ನು ಹೇಳುವಂತೆ ಮಗುವನ್ನು ಕೇಳಿ | ಮಗು ದೂರವಾಣಿ ಸಂಖ್ಯೆ ಅಥವಾ ಮನೆ ವಿಳಾಸ ಹೇಳಬೇಕು | ಸರಿಯಾಗಿ ಹೇಳಿದರೆ=1,<br>ಇಲ್ಲದಿದ್ದರೆ=0 |

**ಸೂಕ್ಷ್ಮ ಚಲನೆ**

| ಕ್ರ.ಸಂ | ವಿಂಗಡಣೆ ಮತ್ತು ಚಟುಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 9 | ಮಗು ಪೆನ್ಸಿಲ್ ಚೆನ್ನಾಗಿ ಹಿಡಿಯುವುದು | ಅಂಗನವಾಡಿ ಕಾರ್ಯಕರ್ತೆ ಗಮನಿಸುವುದು | ಪೆನ್ಸಿಲ್ ಹಿಡಿತವನ್ನು ಗಮನಿಸಿ | ತ್ರಿಪದಿ ಹಿಡಿತ ಇರಬೇಕು | ಹೌದು=1,<br>ಇಲ್ಲ=0 |
| 10 | ಮಗು ಒತ್ತಿ ಬರೆಯುವುದು | ಅಂಗನವಾಡಿ ಕಾರ್ಯಕರ್ತೆ ಗಮನಿಸುವುದು | ಬರವಣಿಗೆಯ ಒತ್ತಡ ಗಮನಿಸಿ | ಒತ್ತಡವಿಲ್ಲದೆ ಬರವಣಿಗೆಯಿರಬೇಕು | ಹೌದು=1,<br>ಇಲ್ಲ=0 |
| 11 | ಆಕಾರದೊಳಗೆ ಬಣ್ಣ ಹಾಕುವುದು (ಚಟುವಟಿಕೆ ಸಂಖ್ಯೆ 11) | ಚಟುವಟಿಕೆ ಹಾಳೆ 11 ಉಪಯೋಗಿಸಿ | ಚಟುವಟಿಕೆ ಹಾಳೆಯನ್ನು ಮಕ್ಕಳಿಗೆ ಕೊಟ್ಟು ಆಕರದೊಳಗೆ ಬಣ್ಣ ಹಾಕಲು ಹೇಳಿ | ಎಲ್ಲಾ ಆಕರಗಳಿಗೆ ಬಣ್ಣ ಹಾಕಬೇಕು. ಬಣ್ಣ ಆಕಾರದಿಂದ ಹೊರಗೆ ಬರದಂತೆ ಹಾಕಬೇಕು | 4=1, 4ಕ್ಕಿಂತ ಕಡಿಮೆ=0 |

| | | | | | |
|---|---|---|---|---|---|
| 12 | ಅಂಗಿಯ ಗುಂಡಿ ತೆಗೆಯುವುದು | ಗುಂಡಿಗಳಿರುವ ಒಂದು ಅಂಗಿ | ಹಾಕಿದ ಗುಂಡಿಗಳನ್ನು ತೆಗೆಯುವೆಯಾ? ಎಂದು ಮಗುವಿಗೆ ಕೇಳಿ | ಎಲ್ಲಾ ಗುಂಡಿಗಳನ್ನು ತೆಗೆಯಬೇಕು | ಹೌದು=1, ಇಲ್ಲ=0 |
| 13 | ಅಂಗಿಯ ಗುಂಡಿ ಹಾಕುವುದು | ಗುಂಡಿಗಳಿರುವ ಒಂದು ಅಂಗಿ | ನೀನು ಅಂಗಿಯ ಗುಂಡಿಗಳನ್ನು ಹಾಕುವೆಯಾ? ಎಂದು ಮಗುವಿಗೆ ಕೇಳಿ | ಎಲ್ಲಾ ಗುಂಡಿಗಳನ್ನು ಅದಕ್ಕೆ ಸರಿಹೊಂದುವ ಕಾಜಾಗಳಲ್ಲಿ ಹಾಕಬೇಕು | ಹೌದು=1, ಇಲ್ಲ=0 |

**ಶಿಕ್ಷಣ ಪೂರ್ವ ಬರೆಯುವುದು**

| ಕ್ರ.ಸಂ | ವಿಂಗಡಣೆ ಮತ್ತು ಚಟುಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 14 | ಮಗು ಆಕಾರಗಳ ಮೇಲೆ ತಿದ್ದುವುದು (ಚಟುವಟಿಕೆ ಸಂಖ್ಯೆ 14) | ಚಟುವಟಿಕೆ ಹಾಳೆ– ಚುಕ್ಕಿಗಳಿಂದ ಕೂಡಿದ ವಿವಿಧ ಆಕಾರಗಳು (ಚಟುವಟಿಕೆ ಹಾಳೆ–14–ಬಳಸಿ) | ಚಟುವಟಿಕೆ ಹಾಳೆಯನ್ನು ತೋರಿಸಿ ಅದರ ಮೇಲೆ ತಿದ್ದಲು ಹೇಳಿ | ಎಲ್ಲವನ್ನು ಪೂರ್ತಿಯಾಗಿ ತಿದ್ದಬೇಕು | 4=1, 4ಕ್ಕಿಂತ ಕಡಿಮೆ=0 |
| 15 | ಮಗು ಆಕಾರಗಳನ್ನು ನಕಲು ಮಾಡುವುದು (ಚಟುವಟಿಕೆ ಸಂಖ್ಯೆ15) | (ಚಟುವಟಿಕೆ ಹಾಳೆ–15–ಬಳಸಿ) | ಮೇಲೆ ಬರೆದ ಆಕಾರಗಳನ್ನು ನಕಲು ಮಾಡಲು ಹೇಳಿ | ಎಲ್ಲವನ್ನು ಪೂರ್ತಿಯಾಗಿ ನಕಲು ಮಾಡಬೇಕು | 3=1, 3ಕ್ಕಿಂತ ಕಡಿಮೆ=0 |
| 16 | ಮಗು ಅಕ್ಷರಗಳನ್ನು ತಿದ್ದುವುದು (ಚಟುವಟಿಕೆ ಸಂಖ್ಯೆ 16) | (ಚಟುವಟಿಕೆ ಹಾಳೆ–16–ಬಳಸಿ) | ಚುಕ್ಕಿಗಳನ್ನು ಸೇರಿಸಿ ಅಕ್ಷರಗಳನ್ನು ತಿದ್ದಲು ಹೇಳಿ | ಎಲ್ಲಾ ಕನ್ನಡ ಅಕ್ಷರಗಳನ್ನು ಪೂರ್ತಿಯಾಗಿ ತಿದ್ದಬೇಕು | 3=1, 3ಕ್ಕಿಂತ ಕಡಿಮೆ=0 |
| 17 | ಮಗು ಅಕ್ಷರಗಳನ್ನು ನಕಲು ಮಾಡುವುದು (ಚಟುವಟಿಕೆ ಸಂಖ್ಯೆ 17) | (ಚಟುವಟಿಕೆ ಹಾಳೆ–17–ಬಳಸಿ) | ಕೊಟ್ಟಿರುವ ಅಕ್ಷರಗಳನ್ನು ನೋಡಿ ನಕಲು ಮಾಡಲು ಹೇಳಿ | ಎಲ್ಲಾ ಕನ್ನಡ ಅಕ್ಷರಗಳನ್ನು ಪೂರ್ತಿಯಾಗಿ ನಕಲು ಮಾಡಬೇಕು | 3=1, 3ಕ್ಕಿಂತ ಕಡಿಮೆ=0 |
| 18 | ಮಗು ಅಕ್ಷರಗಳನ್ನು ತಿದ್ದುವುದು (ಚಟುವಟಿಕೆ ಸಂಖ್ಯೆ 18) | (ಚಟುವಟಿಕೆ ಹಾಳೆ–18–ಬಳಸಿ) | ಚುಕ್ಕಿಗಳನ್ನು ಸೇರಿಸಿ ಅಕ್ಷರಗಳನ್ನು ತಿದ್ದಲು ಹೇಳಿ | ಎಲ್ಲಾ ಇಂಗ್ಲೀಷ್ ಅಕ್ಷರಗಳನ್ನು ಪೂರ್ತಿಯಾಗಿ ತಿದ್ದಬೇಕು | 3=1, 3ಕ್ಕಿಂತ ಕಡಿಮೆ=0 |
| 19 | ಮಗು ಅಕ್ಷರಗಳನ್ನು ನಕಲು ಮಾಡುವುದು (ಚಟುವಟಿಕೆ ಸಂಖ್ಯೆ 19) | (ಚಟುವಟಿಕೆ ಹಾಳೆ–19–ಬಳಸಿ) | ಕೊಟ್ಟಿರುವ ಅಕ್ಷರಗಳನ್ನು ನೋಡಿ ನಕಲು ಮಾಡಲು ಹೇಳಿ | ಎಲ್ಲಾ ಇಂಗ್ಲೀಷ್ ಅಕ್ಷರಗಳನ್ನು ಪೂರ್ತಿಯಾಗಿ ನಕಲು ಮಾಡಬೇಕು | 3=1, 3ಕ್ಕಿಂತ ಕಡಿಮೆ=0 |
| 20 | ಮಗು ಸಂಖ್ಯೆಗಳನ್ನು ತಿದ್ದುವುದು (ಚಟುವಟಿಕೆಸಂಖ್ಯೆ 20) | (ಚಟುವಟಿಕೆ ಹಾಳೆ –20– ಬಳಸಿ) | ಚುಕ್ಕಿಗಳನ್ನು ಸೇರಿಸಿ ಮಗುವಿಗೆ ತಿದ್ದಲು ಹೇಳಿ | ಎಲ್ಲಾ ಸಂಖ್ಯೆಗಳನ್ನು ಪೂರ್ತಿಯಾಗಿ ತಿದ್ದಬೇಕು | 3=1, 3ಕ್ಕಿಂತ ಕಡಿಮೆ=0 |
| 21 | ಮಗು ಸಂಖ್ಯೆಗಳನ್ನು ನಕಲು ಮಾಡುವುದು (ಚಟುವಟಿಕೆ ಸಂಖ್ಯೆ 21) | (ಚಟುವಟಿಕೆ ಹಾಳೆ–21–ಬಳಸಿ) | ಕೊಟ್ಟಿರುವ ಸಂಖ್ಯೆಗಳನ್ನು ನೋಡಿ ನಕಲು ಮಾಡಲು ಹೇಳಿ | ಎಲ್ಲಾ ಸಂಖ್ಯೆಗಳನ್ನು ಪೂರ್ತಿಯಾಗಿ ನಕಲು ಮಾಡಬೇಕು | 3=1, 3ಕ್ಕಿಂತ ಕಡಿಮೆ=0 |
| 22 | ಮಗು ತನ್ನ ಹೆಸರನ್ನು ಬರೆಯುವುದು (ಗಮನಿಸಿ) | ಅಭ್ಯಾಸ ಪುಸ್ತಕ/ಸ್ಲೇಟ್ | ಮಗು ತನ್ನ ಹೆಸರನ್ನು ಅಭ್ಯಾಸ ಪುಸ್ತಕ ಅಥವಾ ಸ್ಲೇಟ್‌ನ ಮೇಲೆ ಬರೆದ ನಂತರ ಪರಿಶೀಲಿಸುವುದು | ತನ್ನ ಹೆಸರನ್ನು ಸರಿಯಾಗಿ ಬರೆದಿರಬೇಕು (ಕನ್ನಡ/ಇಂಗ್ಲೀಷ್) | ಹೌದು=1, ಇಲ್ಲ=0 |

**ಶಿಕ್ಷಣ ಪೂರ್ವ ಗಣಿತ**

| ಕ್ರ.ಸಂ | ವಿಂಗಡಣೆ ಮತ್ತು ಚಟುಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 23 | ಮಗು 1 ರಿಂದ 20 ರವರೆಗೆ ಸಂಖ್ಯೆ ಹೇಳುವುದು | ಮೌಖಿಕವಾಗಿ | ನಿನಗೆ 1,2,3, ಸಂಖ್ಯೆಗಳು ಗೊತ್ತಾ? ಹಾಗಾದರೆ ಹೇಳು, 1 ರಿಂದ 20 ರವರೆಗೆ ಹೇಳಿಸಿ | ಕ್ರಮ ಬದ್ಧವಾಗಿ ಹೇಳಬೇಕು | 20=1, 20ಕ್ಕಿಂತ ಕಡಿಮೆ=0 |
| 24 | ಅನುಕ್ರಮ ಜೋಡಣೆ ಮಾಡುವುದು | ಕಡ್ಡಿಗಳು ಅಥವಾ ಪೆನ್ಸಿಲ್ ಗಳು 2", 3", 4", 5", | ಮಗು ದೊಡ್ಡದರಿಂದ ಚಿಕ್ಕದು ಅಥವಾ ಚಿಕ್ಕದರಿಂದ ದೊಡ್ಡದನ್ನು ಅನುಕ್ರಮವಾಗಿ ಜೋಡಿಸುವುದು. | ಮಗು ಅನುಕ್ರಮವಾಗಿ ಜೋಡಿಸಬೇಕು | ಹೌದು=1, ಇಲ್ಲ=0 |
| 25 | ಯಾವುದರಲ್ಲಿ ಹೆಚ್ಚು ಮೀನುಗಳಿವೆ (ಚಟುವಟಿಕೆ ಸಂಖ್ಯೆ 25) | ಚಟುವಟಿಕೆ ಹಾಳೆ 25 ಬಳಸಿ | ಚಟುವಟಿಕೆ ಹಾಳೆ ತೋರಿಸಿ ಯಾವುದರಲ್ಲಿ ಹೆಚ್ಚು ಮೀನುಗಳಿವೆ ತೋರಿಸು ಎಂದು ಕೇಳುವುದು | ಸರಿಯಾಗಿ ತೋರಿಸಬೇಕು | ಹೌದು=1, ಇಲ್ಲ=0 |
| 26 | ಕಾರ್ಯಕರ್ತೆ ಹೇಳಿದ ಸಂಖ್ಯೆ ತೋರಿಸುವುದು(ಚಟುವಟಿಕೆ ಸಂಖ್ಯೆ 26) | ಚಟುವಟಿಕೆ ಹಾಳೆ–26 ಬಳಸಿ | ಕಾರ್ಯಕರ್ತೆ ಹೇಳಿದ ಸಂಖ್ಯೆಯನ್ನು ಮಗು ಬೆರಳಿಟ್ಟು ತೋರಿಸಬೇಕು | ಮಗು ಕನಿಷ್ಠ 5 ಸಂಖ್ಯೆಯನ್ನು ಸರಿಯಾಗಿ ತೋರಿಸಬೇಕು | 10=1, 10,ಕ್ಕಿಂತ ಕಡಿಮೆ=0 |
| 27 | 1–10 ರವರೆಗೆ ಸಂಖ್ಯೆ ಗುರುತಿಸುವುದು (ಚಟುವಟಿಕೆ ಸಂಖ್ಯೆ 27) | ಚಟುವಟಿಕೆ ಹಾಳೆ–27 ಬಳಸಿ | ಪ್ರತೀ ಸಂಖ್ಯೆಯ ಮೇಲೆ ಬೆರಳಿರಿಸಿ ಇದು ಯಾವ ಸಂಖ್ಯೆ ಎಂದು ಕೇಳಿ | ಮಗು ಸರಿಯಾಗಿ ಗುರುತಿಸಬೇಕು | 10=1, 10ಕ್ಕಿಂತ ಕಡಿಮೆ=0 |
| 28 | ಯಾವುದೇ 10 ವಸ್ತುಗಳನ್ನು ಎಣಿಸುವುದು | ತರಕಾರಿ/ ಹಣ್ಣುಗಳು/ ಕೇಂದ್ರದಲ್ಲಿ ಇರುವ ಯಾವುದೇ ವಸ್ತುಗಳು | 10 ತರಕಾರಿ/ಹಣ್ಣು/ವಸ್ತುಗಳನ್ನು ಮಗುವಿನ ಮುಂದೆ ಸಾಲಾಗಿ ಇಟ್ಟು ಮಗುವಿಗೆ ಎಣಿಸಲು ಹೇಳಿ | ಸರಿಯಾದ ಎಣಿಕೆ | ಎಣಿಸಿದರೆ=1, ಎಣಿಸದಿದ್ದರೆ=0 |
| 29 | ಹೆಜ್ಜೆಯಿಂದ ಅಳತೆ ಮಾಡುವುದು | ಚಾಪೆ/1 ಮೀ.ಹಗ್ಗ/ 3 ಅಡಿ ನೇರವಾದ ಗೆರೆ | ಮಗು ಒಂದೊಂದೆ ಹೆಜ್ಜೆಯಿಂದ ವಸ್ತುವನ್ನು ಅಳೆಯಲು ಹೇಳಿ | ಸರಿಯಾದ ಅಳತೆ | ಸರಿಯಾಗಿ ಅಳತೆ ಮಾಡಿದರೆ=1, ಮಾಡದಿದ್ದರೆ=0 |
| 30 | ಎಣಿಸಿ ಮೊತ್ತ ಬರೆಯಿರಿ (ಚಟುವಟಿಕೆ ಸಂಖ್ಯೆ 30) | ಚಟುವಟಿಕೆ ಹಾಳೆ 30 ಬಳಸಿ | ಚಟುವಟಿಕೆ ಹಾಳೆ ತೋರಿಸಿ ಎಣಿಸಿ ಮೊತ್ತ ಬರೆಯಲು ತಿಳಿಸುವುದು | ಸರಿಯಾಗಿ ಎಣಿಸಿ, ಬರೆಯಬೇಕು | ಸರಿ=1, ತಪ್ಪು=0 |

**ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆ**

| ಕ್ರ.ಸಂ | ವಿಂಗಡಣೆ ಮತ್ತು ಚಟುಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 31 | ಮಗು ಆಟಿಕೆಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳುವುದು | --------- | ಪ್ರತೀ ಮಗುವನ್ನು ಗಮನಿಸುವುದು | ಮಗು ಆಟಿಕೆಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳಬೇಕು. | ಹೌದು=1, ಇಲ್ಲ=0 |
| 32 | ಸರದಿಗಾಗಿ ಕಾಯುವುದು | --------- | ಪ್ರತೀ ಮಗುವನ್ನು ಗಮನಿಸುವುದು | ಸರದಿಗಾಗಿ ಕಾಯಬೇಕು. | ಹೌದು=1, ಇಲ್ಲ=0 |
| 33 | ಸ್ನೇಹಿತರನ್ನು ಮಾಡಿಕೊಳ್ಳುವುದು | ---------- | ಪ್ರತೀ ಮಗುವನ್ನು ಗಮನಿಸುವುದು | ಸ್ನೇಹಿತರನ್ನು ಮಾಡಿಕೊಳ್ಳಬೇಕು. | ಹೌದು=1, ಇಲ್ಲ=0 |
| 34 | ಕೇಂದ್ರದ ವಸ್ತುವನ್ನು ಜೋಪಾನ ಮಾಡುವುದು | ---------- | ಪ್ರತೀ ಮಗುವನ್ನು ಗಮನಿಸುವುದು | ಕೇಂದ್ರದ ವಸ್ತುವನ್ನು ಜೋಪಾನ ಮಾಡಬೇಕು. | ಹೌದು=1, ಇಲ್ಲ=0 |
| 35 | ಕಾರ್ಯಕರ್ತೆಗೆ ಮತ್ತು ಸಹಾಯಕಿಗೆ ಸಹಾಯ ಮಾಡುವುದು | --------- | ಪ್ರತೀ ಮಗುವನ್ನು ಗಮನಿಸುವುದು | ಕಾರ್ಯಕರ್ತೆಗೆ ಮತ್ತು ಸಹಾಯಕಿಗೆ ಸಹಾಯ ಮಾಡಬೇಕು. | ಹೌದು=1, ಇಲ್ಲ=0 |

## ಅನುಕೂಲಕಾರರ ಪ್ರತಿ – (4–6)

### ಸ್ಥೂಲ ಚಲನೆ

| ಕ್ರ.ಸಂ | ವಿಂಗಡಣೆ ಮತ್ತು ಚಟುಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 36 | ಚೆಂಡು ಎಸೆಯುವುದು | ಚೆಂಡು | ನಾನು ಈ ಚೆಂಡನ್ನು ಎಸೆಯುತ್ತೇನೆ. ನೀನು ಈ ಚೆಂಡನ್ನು ಹಿಡಿಯಬೇಕು ಎಂದು ಮಗುವಿಗೆ ಹೇಳಿ. ಚೆಂಡನ್ನು ಮಗುವಿನ ಕಡೆ ಎಸೆಯಿರಿ (ಗುಂಪು ಚಟುವಟಿಕೆ–ಎಲ್ಲಾ ಮಗುವಿಗೆ ಕನಿಷ್ಠ 3 ಬಾರಿ ಅವಕಾಶ ಕೊಡುವುದು) | ಕನಿಷ್ಠ ಒಂದು ಬಾರಿ ಮಗು ಚೆಂಡನ್ನು ಹಿಡಿಯಬೇಕು | ಚೆಂಡನ್ನು ಹಿಡಿದರೆ=1, ಹಿಡಿಯದಿದ್ದರೆ=0 |
| 37 | ಚೆಂಡು ಹಿಡಿಯುವುದು | ಚೆಂಡು | ಚೆಂಡನ್ನು ನಿಮ್ಮ ಕಡೆಗೆ ಎಸೆಯುವಂತೆ ಮಗುವಿಗೆ ಹೇಳಿ. (ಗುಂಪು ಚಟುವಟಿಕೆ–ಎಲ್ಲಾ ಮಗುವಿಗೆ ಕನಿಷ್ಠ 3 ಬಾರಿ ಅವಕಾಶ ಕೊಡುವುದು) | ಮಗು ಚೆಂಡನ್ನು ನಿಮ್ಮ ನೇರಕ್ಕೆ ಅಥವಾ ನಿಮ್ಮ ಕಡೆಗೆ ಎಸೆಯಬೇಕು (ಕನಿಷ್ಠ 1 ಬಾರಿ) | ಎಸೆದರೆ=1, ಎಸೆಯದಿದ್ದರೆ=0 |
| 38 | ಒಂಟಿ ಕಾಲಿನಲ್ಲಿ ಕುಂಟುವುದು | ------- | ಎಲ್ಲಾ ಮಕ್ಕಳಿಗೆ ಕುಂಟಾಟ ಆಡಿಸಿ. ಎಲ್ಲಾ ಮಗುವಿಗೂ ಅವಕಾಶ ಸಿಗುವಂತೆ ಮಾಡಿಸುವುದು (ಗುಂಪು ಚಟುವಟಿಕೆ) | ಕನಿಷ್ಠ 5 ಹೆಜ್ಜೆ ಮಗು ಕುಂಟಬೇಕು | ಕುಂಟಿದರೆ=1, ಕುಂಟದಿದ್ದರೆ=0 |

### ಭಾಷಾ ಬೆಳವಣಿಗೆ

| ಕ್ರ.ಸಂ | ವಿಂಗಡಣೆ ಮತ್ತು ಚಟುಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 39 | ಅಭಿನಯದೊಂದಿಗೆ ಶಿಶುಗೀತೆ ಹೇಳುವುದು | ಮೌಖಿಕವಾಗಿ | ಯಾವುದಾದರು ಒಂದು ಶಿಶುಗೀತೆಯನ್ನು ಅಭಿನಯದ ಮೂಲಕ ಹೇಳಿಸುವುದು | ಯಾವುದಾದರು ಒಂದು ಶಿಶು ಗೀತೆ (6 ಸಾಲುಗಳವರೆಗೆ ಮತ್ತು ಅಭಿನಯದೊಂದಿಗೆ) | ಹೇಳಿದರೆ=1, ಹೇಳದಿದ್ದರೆ=0 |
| 40 | ಪ್ರಶ್ನೆಗೆ ವಾಕ್ಯದಲ್ಲಿ ಉತ್ತರಿಸುವುದು? ಕನಿಷ್ಠ 3 ಪ್ರಶ್ನೆ (ವಾರದ ವಿಷಯಕ್ಕೆ ಸಂಬಂದಿಸಿದಂತೆ) | ಮೌಖಿಕವಾಗಿ | ವಾರದ ವಿಷಯಕ್ಕೆ ಸಂಬಂದಿಸಿದ 3 ಸರಳ ಪ್ರಶ್ನೆಗಳನ್ನು ಕೇಳಿ<br>ಉದಾ: ನಿಮ್ಮ ವಾರದ ವಿಷಯ ಪ್ರಾಣಿಗಳು ಆಗಿದ್ದಲ್ಲಿ, ಆನೆ ಕಾಡುಪ್ರಾಣಿನಾ ಅಥವಾ ಸಾಕುಪ್ರಾಣಿನಾ? ಎಂದು ಕೇಳಿ | ಮಗು ಸರಿಯಾಗಿ ಉತ್ತರ ಹೇಳಬೇಕು | 3=1, 3ಕ್ಕಿಂತ ಕಡಿಮೆ =0 |
| 41 | 3 ಸೂಚನೆಗಳನ್ನು ಸರಿಯಾದ ಕ್ರಮದಲ್ಲಿ ಪಾಲಿಸುತ್ತಾಳೆ/ನೆ | ಮೌಖಿಕವಾಗಿ | ಮಗುವಿಗೆ ಈ ಕೆಳಗಿನ ಸೂಚನೆಗಳನ್ನು ಹೇಳಿ.<br>1. ಎದ್ದು ನಿಂತು ನಿನ್ನ 2 ಕೈಗಳನ್ನು ಮೇಲೆ ಮಾಡು, ಮತ್ತೆ ತಲೆ ಆಡಿಸು.<br>**ಅಥವಾ**<br>2. ಪೆನ್ಸಿಲ್ ತೆಗೆದುಕೊಂಡು ಬಾಗಿಲ ಬಳಿ ಹೋಗಿ ಇಟ್ಟು, ಪುನಃ ವಾಪಸ್ ಬಾ | ಹೇಳಿದ 3 ಸೂಚನೆಗಳನ್ನು ಮಗು ಸರಿಯಾದ ಕ್ರಮದಲ್ಲಿ ಮಡುಬೇಕು | 3=1, 3ಕ್ಕಿಂತ ಕಡಿಮೆ=0 |
| 42 | 6 ಬಣ್ಣಗಳನ್ನು ಹೆಸರಿಸುತ್ತಾರೆ (ಕೆಂಪು, ನೀಲಿ, ಹಳದಿ, ಕಪ್ಪು, ಬಿಳಿ, ಹಸಿರು) (ಕನ್ನಡದಲ್ಲಿ) | ಕೆಂಪು, ನೀಲಿ, ಹಳದಿ, ಕಪ್ಪು, ಬಿಳಿ, ಹಸಿರು ಬಣ್ಣದ ವಸ್ತುಗಳು/ ಕ್ರಯಾನ್ಸ್/ ತರಕಾರಿ | 6 ಬಣ್ಣದ ವಸ್ತುಗಳನ್ನು ಒಂದಾದ ನಂತರ ಒಂದರಂತೆ ತೋರಿಸಿ. ಅದರ ಬಣ್ಣದ ಹೆಸರು ಹೇಳಲು ಹೇಳಿ | 6 ಬಣ್ಣಗಳನ್ನು ಕನ್ನಡದಲ್ಲೇ ಹೆಸರಿಸಬೇಕು | 6=1, 6 ಕ್ಕಿಂತ ಕಡಿಮೆ=0 |

| | | | | | |
|---|---|---|---|---|---|
| 43 | ಆಕಾರಗಳನ್ನು ಹೆಸರಿಸುವುದು (ತ್ರಿಭುಜ, ವೃತ್ತ, ಚೌಕ, ಆಯತ) (ಕನ್ನಡದಲ್ಲಿ) | ಆಕಾರಗಳು | 4 ಆಕಾರಗಳನ್ನು ಒಂದಾದ ನಂತರ ಒಂದರಂತೆ ತೋರಿಸಿ. ಅದರ ಹೆಸರು ಹೇಳಲು ಹೇಳಿ | 4 ಆಕಾರಗಳನ್ನು ಹೆಸರಿಸಬೇಕು | 4=1, 4ಕ್ಕಿಂತ ಕಡಿಮೆ=0 |
| 44 | 2 ಸರಳ ಪ್ರಶ್ನೆಗಳಿಗೆ ಇಂಗ್ಲೀಷ್‌ನಲ್ಲಿ ಉತ್ತರಿಸುವುದು.<br>1. What is your name?<br>2. How old are you? | ಮೌಖಿಕವಾಗಿ | ಮಗುವಿಗೆ ಇಂಗ್ಲೀಷ್‌ನಲ್ಲಿ ಪ್ರಶ್ನೆ ಕೇಳಿ ಇಂಗ್ಲೀಷ್‌ನಲ್ಲಿ ಉತ್ತರಿಸಲು ಹೇಳಿ<br>1. What is your name?<br>2. How old are you? | 2 ಸರಿಯಾದ ಉತ್ತರ ಇಂಗ್ಲೀಷ್‌ನಲ್ಲಿ ಹೇಳಬೇಕು ಅಂದರೆ<br>1. My name is-------<br>2. I am --- years old. | ಹೌದು=1, ಇಲ್ಲ=0 |
| 45 | ಎಡ ಬಲ ತೋರಿಸುವುದು | --------- | ಮಕ್ಕಳನ್ನು ಸಾಲಾಗಿ ಒಬ್ಬರ ಹಿಂದೆ ಒಬ್ಬರನ್ನು ನಿಲ್ಲಿಸಿ, ನಿನ್ನ ಬಲಬಾಗದಲ್ಲಿ ಯಾರಿದ್ದಾರೆ? ಎಂದು ಮಗುವನ್ನು ಕೇಳಿ. ನಿನ್ನ ಎಡಬಾಗದಲ್ಲಿ ಯಾರಿದ್ದಾರೆ ಎಂದು ಮಗುವನ್ನು ಕೇಳಿ | ಸರಿಯಾಗಿ ಹೆಸರಿಸಬೇಕು. | ಹೆಸರಿಸಿದರೆ=1<br>ಹೆಸರಿಸದಿದ್ದರೆ=0 |
| 46 | ಮುಂದೆ–ಹಿಂದೆ ತೋರಿಸುವುದು | ಮೌಖಿಕವಾಗಿ | ಮಕ್ಕಳನ್ನು ಸಾಲಾಗಿ ಒಬ್ಬರ ಹಿಂದೆ ಒಬ್ಬರನ್ನು ನಿಲ್ಲಿಸಿ, ನಿನ್ನ ಹಿಂದ ಯಾರಿದ್ದಾರೆ? ನಿನ್ನ ಮುಂದೆ ಯಾರಿದ್ದಾರೆ ಎಂದು ಮಗುವನ್ನು ಕೇಳಿ. | ಮುಂದೆ–ಹಿಂದೆ ಸರಿಯಾಗಿ ತೋರಿಸಬೇಕು | ತೋರಿಸಿದರೆ=1<br>ತೋರಿಸದಿದ್ದರೆ=0 |
| 47 | ಕಥೆ ಹೇಳುವುದು (4–5 ಸಾಲಿನ ಕಥೆ) | -------- | ಮಗುವನ್ನು ನಿನಗೆ ಯಾವುದಾದರು ಕಥೆ ಗೊತ್ತಿದ್ದರೆ ಹೇಳುತ್ತೀಯಾ? ಎಂದು ಕೇಳಿ. | ಕಥೆಯ ಮೂರು ವಾಕ್ಯಗಳನ್ನು ಕ್ರಮದಲ್ಲಿ ಹೇಳಬೇಕು | ಹೇಳಿದರೆ=1,<br>ಹೇಳಿದಿದ್ದರೆ=0 |
| 48 | ವಾರದ ಹೆಸರು ಹೇಳುವುದು.<br>ಕನ್ನಡ ಅಥವಾ ಇಂಗ್ಲೀಷ್ | ಮೌಖಿಕವಾಗಿ | ವಾರದ ಹೆಸರು ಹೇಳುತ್ತೀಯ ಎಂದು ಕೇಳಿ. | ಕ್ರಮಬದ್ಧವಾಗಿ ಹೇಳಬೇಕು | ಹೌದು=1, ಇಲ್ಲ=0 |
| 49 | ತಿಂಗಳ ಹೆಸರು ಹೇಳುವುದು ಕನ್ನಡ ಅಥವಾ ಇಂಗ್ಲೀಷ್ | ಮೌಖಿಕವಾಗಿ | ಜನವರಿ, ಫೆಬ್ರವರಿ ತಿಂಗಳುಗಳ ಹೆಸರು ಹೇಳುವೆಯಾ? | ಕ್ರಮದ್ಧವಾಗಿ ಹೇಳಬೇಕು | ಹೌದು=1, ಇಲ್ಲ=0 |

**ಗ್ರಹಣ ಶಕ್ತಿ ಬೆಳವಣಿಗೆ**

| ಕ್ರ.ಸಂ | ವಿಂಗಡಣೆ ಮತ್ತು ಚಟುಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 50 | ಬೇರ್ಪಡಿಸುವುದು (ಎಲೆ,ಕಲ್ಲು,ಬೀಜ) | 5 ಎಲೆ, 5 ಕಲ್ಲು, 5 ಬೀಜ | ಎಲ್ಲಾ ವಸ್ತುಗಳನ್ನು ಮಗುವಿನ ಮುಂದೆ ಹರಡಿ ಎಲೆ, ಕಲ್ಲು, ಬೀಜಗಳನ್ನು ಬೇರ್ಪಡಿಸಲು ಹೇಳಿ | ಎಲೆ, ಕಲ್ಲು, ಬೀಜಗಳನ್ನು ಸರಿಯಾಗಿ ಬೇರ್ಪಡಿಸಬೇಕು | ಹೌದು=1, ಇಲ್ಲ=0 |
| 51 | 5 ವಸ್ತುಗಳ ಪುನರುಚ್ಛಾರಣೆ | ಮೌಖಿಕವಾಗಿ | ವಾರದ ವಿಷಯಕ್ಕೆ ಸಂಬಂದಿಸಿದಂತೆ 5 ಪರಿಚಿತ ವಸ್ತುಗಳನ್ನು ಮಗುವಿಗೆ ಹೇಳಿ ಅವುಗಳನ್ನು ಪುನರುಚ್ಛರಿಸಲು ಹೇಳಿ | ಮಗು ಸರಿಯಾಗಿ ಪುನರುಚ್ಛರಿಸಬೇಕು | ಪುನರುಚ್ಛರಿಸಿದರೆ=1,<br>ಇಲ್ಲದಿದ್ದರೆ=0 |
| 52 | ನನ್ನ ದಿನ ಮಿಂಚುಪಟ್ಟಿಯನ್ನು ಅನುಕ್ರಮದಲ್ಲಿ ಜೋಡಿಸುವುದು | ನನ್ನ ದಿನ ಮಿಂಚುಪಟ್ಟಿ (ಇಲಾಖೆಯ ಕಲಿಕಾ ಸಾಮಗ್ರಿ) | ನನ್ನದಿನ ಮಿಂಚು ಪಟ್ಟಿಗಳನ್ನು ಬೆರೆಸಿ ಮಗುವಿನ ಮುಂದೆ ಇಡುವುದು ನಂತರ ಮಗುವಿಗೆ ಇವುಗಳನ್ನು ಅನುಕ್ರಮದಲ್ಲಿ ಜೋಡಿಸುವೆಯಾ ಎಂದು ಕೇಳಿ | ಸರಿಯಾದ ಜೋಡಣೆ | ಸರಿಯಾಗಿ ಜೋಡಿಸಿದರೆ=1,<br>ಜೋಡಿಸದಿದ್ದರೆ=0 |

ಶಿಕ್ಷಣ ಪೂರ್ವ ಓದುವುದು (ಇಂಗ್ಲೀಷ್)

| ಕ್ರ.ಸಂ | ವಿಂಗಡಣೆ ಮತ್ತು ಚಟುಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 53 | 5 ವಸ್ತುಗಳನ್ನು ಇಂಗ್ಲೀಷ್ ನಲ್ಲಿ ಹೆಸರಿಸುತ್ತಾಳೆ/ನೆ | ಮೌಖಿಕವಾಗಿ, 5 ವಸ್ತುಗಳ ಮಿಂಚುಪಟ್ಟಿಗಳು. | ವಿಷಯಕ್ಕೆ ಸಂಬಂದಿಸಿದ ಯಾವುದಾದರೂ 5 ವಸ್ತುಗಳು/ಮಿಂಚುಪಟ್ಟಿಗಳನ್ನು ಮಗುವಿಗೆ ತೋರಿಸಿ ಇಂಗ್ಲೀಷ್ ನಲ್ಲಿ ಹೇಳುವಂತೆ ಕೇಳುವುದು. | ಇಂಗ್ಲೀಷ್‌ನಲ್ಲಿ ಹೇಳಬೇಕು | 5=1, 5ಕ್ಕಿಂತ ಕಡಿಮೆ=0 |
| 54 | A to Z ಹೇಳುವುದು | ಮೌಖಿಕವಾಗಿ | ನಿನಗೆ A, B, C, D ಗೊತ್ತಿದೆಯಾ ಹಾಗದರೆ ಹೇಳುವೆಯಾ ಎಂದು ಕೇಳಿ | ಮಗು ಪೂರ್ತಿಯಾಗಿ ಕ್ರಮಬದ್ಧವಾಗಿ ಹೇಳಬೇಕು | ಕನಿಷ್ಠ 3 ತಪ್ಪು ಉತ್ತರ ಇದ್ದರೆ =1, 3ಕ್ಕಿಂತ ಜಾಸ್ತಿ ಇದ್ದರೆ=0 |
| 55 | A to Z ವರೆಗೆ ಗುರುತಿಸುವುದು | ಇಂಗ್ಲೀಷ್ ಮಿಂಚು ಪಟ್ಟಿಗಳು | ಮಿಂಚು ಪಟ್ಟಿಗಳನ್ನು ಬೆರೆಸಿ ಯಾವುದಾದರು 10 ಅಕ್ಷರಗಳನ್ನು ಗುರುತಿಸುವವರೆಗೂ ತೋರಿಸಿ. ಪ್ರತಿಯೊಂದು ಮಿಂಚುಪಟ್ಟಿಯನ್ನು ತೋರಿಸಿ ಮತ್ತು ಇದು ಏನು ಎಂದು ಹೇಳಿ. | ಕನಿಷ್ಠ 10 ಅಕ್ಷರಗಳನ್ನು ಗುರುತಿಸುವುದು | ಕನಿಷ್ಠ 10=1, 10 ಕ್ಕಿಂತ ಕಡಿಮೆ=0 |
| 56 | ಅಕ್ಷರದ ಶಬ್ಧಗಳನ್ನು ಸರಿಯಾಗಿ ಉಚ್ಛರಿಸುವುದು | ಇಂಗ್ಲೀಷ್ ಮಿಂಚು ಪಟ್ಟಿಗಳು (ಬೆರೆಸಿ) | ಇಂಗ್ಲೀಷ್ ಯಾವುದೇ 10 ಮಿಂಚುಪಟ್ಟಿಗಳನ್ನು ಒಂದಾದ ನಂತರ ಒಂದರಂತೆ ತೋರಿಸಿ ಆ ಅಕ್ಷರದ ಶಬ್ಧ ಹೇಳಲು ಹೇಳಿ | 10 ಅಕ್ಷರಗಳ ಶಬ್ಧವನ್ನು ಸರಿಯಾಗಿ ಹೇಳಬೇಕು | 10=1, 10 ಕ್ಕಿಂತ ಕಡಿಮೆ=0 |
| 57 | ಪದದ ಪ್ರಾರಂಭದ ಅಕ್ಷರವನ್ನು ಗುರುತಿಸುವುದು | ಚಟುವಟಿಕೆ ಹಾಳೆ 57 | ಚಿತ್ರವನ್ನು ಗುರುತಿಸಿ, ಚಿತ್ರದ ಮೊದಲ ಅಕ್ಷರವನ್ನು ಸರಿಯಾಗಿ ಹೊಂದಿಸುವಂತೆ ಮಗುವಿಗೆ ಹೇಳಿ. | ಮಗು 5 ಚಿತ್ರ ಹಾಗೂ 5 ಅಕ್ಷರಗಳನ್ನು ಗುರುತಿಸುವುದು | 5=1, 5,ಕ್ಕಿಂತ ಕಡಿಮೆ=0 |

ಶಿಕ್ಷಣ ಪೂರ್ವ ಓದುವುದು (ಕನ್ನಡ)

| ಕ್ರ.ಸಂ | ವಿಂಗಡಣೆ ಮತ್ತು ಚಟುಟಿಕೆಗಳು | ಸಾಮಗ್ರಿಗಳು | ವಿಧಾನ | ಫಲಿತಾಂಶ | ಅಂಕ |
|---|---|---|---|---|---|
| 58 | ಅ ಇಂದ ಳ ವರೆಗೆ ಹೇಳುತ್ತಾಳೆ/ನೆ | ಮೌಖಿಕವಾಗಿ | ನಿನಗೆ ಅ.ಆ,ಇ. ಗೊತ್ತಿದೆಯಾ? ಹಾಗದರೆ ಹೇಳುವೆಯಾ ಎಂದು ಮಗುವನ್ನು ಕೇಳಿ | ಮಗು ಕ್ರಮಬದ್ಧವಾಗಿ ಪೂರ್ತಿ ಹೇಳುವುದು | ಹೌದು=1, ಇಲ್ಲ=0 |
| 59 | ಅಕ್ಷರಗಳನ್ನು ಗುರುತಿಸುವುದು. | ಕನ್ನಡ ಮಿಂಚು ಪಟ್ಟಿಗಳು | ಮಿಂಚುಪಟ್ಟಿಗಳನ್ನು ಬೆರೆಸಿ ಯಾವುದಾದರು 15 ಅಕ್ಷರಗಳನ್ನು ಗುರುತಿಸುವವರೆಗೂ ತೋರಿಸಿ | ಕನಿಷ್ಠ 15 ಅಕ್ಷರಗಳನ್ನು ಗುರುತಿಸುವುದು | ಕನಿಷ್ಠ 15=1, 15ಕ್ಕಿಂತ ಕಡಿಮೆ=0 |
| 60 | ಅಕ್ಷರದಿಂದ ಪ್ರಾರಂಭವಾಗುವ ಪದ ಹೇಳುತ್ತಾಳೆ/ನೆ | ಮಿಂಚುಪಟ್ಟಿಗಳು (ಬೆರೆಸಿ) | ಯಾವುದಾದರೂ ಒಂದು ಅಕ್ಷರವನ್ನು ತೋರಿಸಿ ಆ ಅಕ್ಷರದಿಂದ ಪ್ರಾರಂಭವಾಗುವ ಪದ ಹೇಳುವಂತೆ ಕೇಳಿ. ಉದಾ: ಊ=ಊಟ, ಎ=ಎಲೆ. ಅ=ಅರಸ | ಮಗು ಕನಿಷ್ಠ 15 ಅಕ್ಷರಗಳನ್ನು ಬಳಸಿ ಕನಿಷ್ಠ 1 ಪದ ಹೇಳಬೇಕು | ಕನಿಷ್ಠ 15=1, 15ಕ್ಕಿಂತ ಕಡಿಮೆ=0 |
| 61 | ಪದದ ಪ್ರಾರಂಭದ ಅಕ್ಷರ ಗುರುತಿಸುತ್ತಾಳೆ/ನೆ | ಚಟುವಟಿಕೆ ಹಾಳೆ | ಚಿತ್ರವನ್ನು ಗುರುತಿಸಿ, ಚಿತ್ರದ ಮೊದಲ ಅಕ್ಷರವನ್ನು ಸರಿಯಾಗಿ ಹೊಂದಿಸುವಂತೆ ಮಗುವಿಗೆ ಹೇಳಿ. | ಮಗು 5 ಚಿತ್ರ ಹಾಗೂ 5 ಅಕ್ಷರಗಳನ್ನು ಗುರುತಿಸುವುದು | 5=1, 5,ಕ್ಕಿಂತ ಕಡಿಮೆ=0 |
| 62 | 3 ಸರಳ ಪದ ಓದುವುದು | 3 ಅಕ್ಷರಗಳ ಪದಗಳಿರುವ ಮಿಂಚುಪಟ್ಟಿಗಳು | 3 ಅಕ್ಷರಗಳ ಪದಗಳಿರುವ ಮಿಂಚುಪಟ್ಟಿಗಳನ್ನು ಮಕ್ಕಳಿಗೆ ತೋರಿಸುವುದು ಎಲ್ಲಾ ಅಕ್ಷರಗಳನ್ನು ಓದುವಂತೆ ಹೇಳುವುದು.<br>ಉದಾ: ಅರಸ, ಔಷದ, ಉದಯ, ಓಲಗ, ಕಮಲ, ಗಗನ, ಇತ್ಯಾದಿ | ಕನಿಷ್ಠ 3 ಸರಳ ಪದಗಳನ್ನು ಮಗು ಹೇಳಬೇಕು | ಎಲ್ಲಾ 3 ಪದಗಳು=1, 3ಕ್ಕಿಂತ ಕಡಿಮೆ=0 |

2 ರಿಂದ 4 ವರ್ಷದ ಮಕ್ಕಳ ಚಟುವಟಿಕೆ ಆಧಾರಿತ ಮೌಲ್ಯಮಾಪನದ ಮಾದರಿ ಪತ್ರಿಕೆ – ಕಾರ್ಯಕರ್ತೆಯ ಪ್ರತಿ

| CID- ಮಗುವಿನ ಗುರುತು | ಮಗುವಿನ ಹೆಸರು | ತಂದೆಯ ಹೆಸರು | ತಾಯಿಯ ಹೆಸರು | ಲಿಂಗ | ಹುಟ್ಟಿದ ದಿನಾಂಕ | ಎತ್ತರ | ತೂಕ | ಸಾಮಾನ್ಯ ಅರಿವು | | | | | | ಸೂಕ್ಷ್ಮ ಚಲನೆಯ ಕೌಶಲಗಳು | | | | |
|---|---|---|---|---|---|---|---|---|---|---|---|---|---|---|---|---|---|---|
| | | | | | | | | ಮಗು ತನ್ನ ಹೆಸರು ಹೇಳುತ್ತದೆಯೇ | ತಾಯಿಯ ಹೆಸರು ಹೇಳುತ್ತದೆಯೇ | ತಂದೆಯ ಹೆಸರು ಹೇಳುತ್ತದೆಯೇ ಸಾಮಾನ್ಯ ಅರಿವು | ಕಾರ್ಯಕರ್ತೆಯ ಹೆಸರು ಹೇಳುತ್ತದೆಯೇ | ತನ್ನ ಹಳ್ಳಿ/ಏರಿಯ ಹೆಸರು ಹೇಳುತ್ತದೆಯೇ | ಅಣ್ಣ – ಅಕ್ಕ ಹೆಸರು ಹೇಳುತ್ತದೆಯೇ | ಮಗು ಬೀಳದೆ ನಡೆಯುವುದು | ಮಗು ಬೀಳದೆ ಓಡುವುದು | ಜಿಗಿಯುವುದು (3 ಬಾರಿ ಜಿಗಿಯುವುದು ಗುಂಪು ಚಟುವಟಿಕೆ) | ಚೆಂಡನ್ನು ಒದೆಯುವುದು | ನೇರವಾದ ಗೆರೆಯ ಮೇಲೆ ನಡೆಯವುದು (ಗುಂಪು ಚಟುವಟಿಕೆ) |
| | | | | | | | | ಹೌದು=1, ಇಲ್ಲ=0 | | | | | | ಹೌದು=1, ಇಲ್ಲ=0 (ಕಾರ್ಯಕರ್ತೆ ಗಮನಿಸುವುದು) | | ಜಿಗಿದರೆ=1 ಜಿಗಿಯದಿದ್ದರೆ=0 | ಚೆಂಡನ್ನು ಒದ್ದರೆ=1, ಒದೆಯದಿದ್ದರೆ=0 | ನಡೆದರೆ=1, ನಡೆಯದಿದ್ದರೆ=0 |
| | | | | | | | | 1 | 2 | 3 | 4 | 5 | 6 | 7 | 8 | 9 | 10 | 11 |

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| | | | | | | | | ಸೂಕ್ಷ್ಮ ಚಲನೆಯ ಕೌಶಲಗಳು | | | | | | ಕ್ರಿಯಾತ್ಮಕ ಬೆಳವಣಿಗೆ | |
| | | | | | | | | ಸ್ವಸಹಾಯ ಕೌಶಗಲೂ | ಕೈ ಚಳಕ ಬಳಕೆಯ ಕೌಶಲಗಳು | | | | | | |
| ಅಖಆ– ಮಗುವಿನ ಗುರುತು | ಮಗುವಿನ ಹೆಸರು | ತಂದೆಯ ಹೆಸರು | ತಾಯಿಯ ಹೆಸರು | ಲಿಂಗ | ಹುಟ್ಟಿದ ದಿನಾಂಕ | ಎತ್ತರ | ತೂಕ | ಮಗು ಯಾರ ಸಹಾಯವಿಲ್ಲದೆ ತನ್ನ ಊಟ ನಾನೆ ತಿನ್ನುತ್ತಾಳೆ/ನೆ. (ಅಂಗನವಾಡಿ ಕಾರ್ಯಕರ್ತೆಯ ಗಮನಿಸುವಿಕೆ) | ಬಾಟಲ್‌ಗಳ ಮುಚ್ಚಳವನ್ನು ಹಾಕುವುದು & ತೆಗೆಯುವುದು | ನೀರನ್ನು ಸುರಿಯುವುದು | 3 ಬೆರಳಿನಿಂದ ಸಣ್ಣ ವಸ್ತುಗಳನ್ನು ಎತ್ತಿ ಬಟ್ಟಲಲ್ಲಿ ಹಾಕುವುದು (ತ್ರಿಪದಿ) | ಗೋಪುರ ನಿರ್ಮಾಣ (5 ಘನಾಕೃತಿಗಳು / ಖಾಲಿ ಬೆಂಕಿಪಟ್ಟೊಣಗಳು) | ಕ್ರಯಾನ್ಸ್‌ನ್ನು ತ್ರಿಪದಿಯಲ್ಲಿ ಹಿಡಿದು ಬಣ್ಣ ಹಾಕುವುದು (ಕ್ರಯಾನ್ಸ್/ ಸೀಮೆಸುಣ್ಣ) | ಚಿತ್ರಕಲೆ–ಕಲೆಯಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಾರೆ | ಸಂಗೀತ ನೃತ್ಯದಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಾರೆ |
| | | | | | | | | ಹೌದು=1, ಇಲ್ಲ=0 | ಹಾಕಿ ತೆಗೆದರೆ=1, ಇಲ್ಲದಿದ್ದರೆ=0 | ಚೆಲ್ಲದೆ ಸುರಿದರೆ=1, ಚೆಲ್ಲಿದರೆ=0 | ತ್ರಿಪದಿಯಲ್ಲಿ ಹಿಡಿದು ಹಾಕಿದರೆ=1 ಇಲ್ಲದಿದ್ದರೆ=0 | ಹೌದು=1, ಇಲ್ಲ=0 | ತ್ರಿಪದಿಯಲ್ಲಿ ಹಿಡಿದರೆ=1, ಹಿಡಿಯದಿದ್ದರೆ=0 | ಮಗು ಆಸಕ್ತಿಯಿಂದ ಭಾಗವಹಿಸಿದರೆ=1, ಕಾರ್ಯಕರ್ತೆಯ ಒತ್ತಾಯದಿಂದ ಭಾಗವಹಿಸಿದರೆ=0 | |
| | | | | | | | | 12 | 13 | 14 | 15 | 16 | 17 | 18 | 19 |

| CID- ಮಗುವಿನ ಗುರುತು | ಮಗುವಿನ ಹೆಸರು | ತಂದೆಯ ಹೆಸರು | ತಾಯಿಯ ಹೆಸರು | ಲಿಂಗ | ಹುಟ್ಟಿದ ದಿನಾಂಕ | ಎತ್ತರ | ತೂಕ | ಗ್ರಹಣ ಶಕ್ತಿ ಬೆಳವಣಿಗೆ | | | | | | |
|---|---|---|---|---|---|---|---|---|---|---|---|---|---|---|
| | | | | | | | | ಪ್ರಾಥಮಿಕ ಬಣ್ಣಗಳನ್ನು ಹೊಂದಿಸುವುದು (ಚಟುವಟಿಕೆ ಮುಖಾಂತರ) | ಆಕಾರಗಳನ್ನು ಹೊಂದಿಸುವುದು (ಚಟುವಟಿಕೆ ಮುಖಾಂತರ) | ಆಕಾರಗಳನ್ನು ಬೇರ್ಪಡಿಸುವುದು (ಚಟುವಟಿಕೆ ಮುಖಾಂತರ) | ಬಣ್ಣಗಳನ್ನು ಬೇರ್ಪಡಿಸುವುದು (ಚಟುವಟಿಕೆ ಮುಖಾಂತರ) | ಕನಿಷ್ಠ 3 ಸಂಖ್ಯೆಗಳು ಅಥವಾ ವಸ್ತುಗಳನ್ನು ಪುನರುಚ್ಛರಿಸುವುದು | ಹಗಲು – ರಾತ್ರಿ ವ್ಯತ್ಯಾಸ ಗುರುತಿಸುವುದು | ಮಾದರಿಯನ್ನು ಕ್ರಮವಾಗಿ ಮುಂದುವರೆಸುವುದು. (ಚಟುವಟಿಕೆ ಮುಖಾಂತರ) |
| | | | | | | | | ಹೊಂದಿಸಿದರೆ=1, ಹೊಂದಿಸದಿದ್ದರೆ=0 | | ಬೇರ್ಪಡಿಸಿದರೆ=1, ಬೇರ್ಪಡಿಸದಿದ್ದರೆ=0 | | ಹೇಳಿದರೆ=1, ಹೇಳದಿದ್ದರೆ=0 | | ಮಾದರಿಯನ್ನು ಮುಂದುವರೆಸಿದರೆ= 1, ಮುಂದುವರೆಸದಿದ್ದ ರೆ =0 |
| | | | | | | | | 20 | 21 | 22 | 23 | 24 | 25 | 26 |

| ತಂದೆಯ ಹೆಸರು | ತಾಯಿಯ ಹೆಸರು | ಲಿಂಗ | ಹುಟ್ಟಿದ ದಿನಾಂಕ | ಎತ್ತರ | ತೂಕ | ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆ | | | | | | | | | |
|---|---|---|---|---|---|---|---|---|---|---|---|---|---|---|---|
| | | | | | | ಮಗು ಅಳದೆ ಕೇಂದ್ರಕ್ಕೆ ಬರುತ್ತಾರೆ | ಮಗು ಕೇಂದ್ರದ ವೇಳಾಪಟ್ಟಿಯನ್ನು ಪಾಲಿಸುತ್ತಾನೆ/ಳೆ | ಮಗು ಭಾವನೆಗಳನ್ನು ವ್ಯಕ್ತ ಪಡಿಸುತ್ತಾನೆ/ಳೆ | ಮಗು ಸ್ನೇಹಿತರೊಂದಿಗೆ ಆಡುತ್ತಾನೆ/ಳೆ | ಮಗು ಚಟುವಟಿಕೆಗಳಲ್ಲಿ ಭಾಗವಹಿಸುತ್ತಾನೆ/ಳೆ | ಮಗು ಕೇಂದ್ರದ ನಿಯಮಗಳನ್ನು ಪಾಲಿಸುತ್ತಾನೆ/ಳೆ | ಮಗು ಕೇಂದ್ರಕ್ಕೆ ಬರುವಾಗ ಮತ್ತು ಹೋಗುವಾಗ ಕಾರ್ಯಕರ್ತೆಗೆ ಅಭಿನಂದಿಸುತ್ತಾನೆ/ಳೆ | ಮಗು ಕೇಂದ್ರಕ್ಕೆ ಸ್ವಚ್ಛತೆಯಿಂದ ಬರುತ್ತಾಳೆ/ನೆ | ಮಗು ಸಮಯಕ್ಕೆ ಸರಿಯಾಗಿ ಬರುತ್ತಾಳೆ/ನೆ | ಮಗು ಇತರ ಮಕ್ಕಳೊಂದಿಗೆ ಹೊಂದಿಕೊಳ್ಳುತ್ತಾನೆ/ಳೆ |
| | | | | | | ಹೌದು=1, ಇಲ್ಲ=0 (ಕಾರ್ಯಕರ್ತೆ ಗಮನಿಸಿ ಅಂಕ ಕೊಡುವುದು) | | | | | | | 75% =1, 75% ಗಿಂತ ಕಡಿಮೆ=0 | | ಹೊಂದಿಕೊಂಡರೆ=1, ಇಲ್ಲದಿದ್ದರೆ=0 |
| | | | | | | 27 | 28 | 29 | 30 | 31 | 32 | 33 | 34 | 35 | 36 |

**ಅನುಕೂಲಕಾರರ ಪ್ರತಿ:**

| CID- ಮಗುವಿನ ಗುರುತು | ಮಗುವಿನ ಹೆಸರು | ತಂದೆಯ ಹೆಸರು | ತಾಯಿಯ ಹೆಸರು | ಲಿಂಗ | ಹುಟ್ಟಿದ ದಿನಾಂಕ | ಎತ್ತರ | ತೂಕ | ಭಾಷಾ ಬೆಳವಣಿಗೆ | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|
| | | | | | | | | 3 ಪದಗಳ ವಾಕ್ಯ ಮಾಡುವುದು | 2 ಸೂಚನೆಗಳನ್ನು ಪಾಲಿಸುವುದು | ಶಿಶು ಗೀತೆಯನ್ನು ಹೇಳುವುದು (2 ರಿಂದ 4 ಸಾಲು) | 3 ಕ್ರಿಯೆಗಳನ್ನು ಗುರುತಿಸುವುದು | ದೇಹದ ಅಂಗಾಗಳನ್ನು ಗುರುತಿಸುವುದು. (ತಲೆ,ಕಣ್ಣು, ಕೈ, ಕಾಲು, ಹೊಟ್ಟೆ). | ಮಗು ಮೇಲೆ–ಕೆಳಗೆ ತೋರಿಸುವುದು | ಮಗು ಒಳಗೆ–ಹೊರಗೆ ತೋರಿಸುವುದು | ಪ್ರಾಥಮಿಕ ಬಣ್ಣಗಳನ್ನು ಗುರುತಿಸುವುದು (ಕೆಂಪು, ನೀಲಿ, ಹಳದಿ) | ಮೂಲ ಆಕಾರ ಹೆಸರು ಹೇಳುವುದು(ವೃತ್ತ, ತ್ರಿಭುಜ, ಚೌಕ) | 5 ತರಕಾರಿಗಳನ್ನು ಹೆಸರಿಸುವುದು | 5 ಹಣ್ಣುಗಳನ್ನು ಹೆಸರಿಸುವುದು | ವಾರದ ಹೆಸರುಗಳನ್ನು ಕ್ರಮಬದ್ಧವಾಗಿ ಹೇಳುವುದು |
| | | | | | | | | ಮಾಡಿದರೆ =1, ಮಾಡದಿದ್ದರೆ=0 | ಪಾಲಿಸಿದರೆ =1, ಪಾಲಿಸದಿದ್ದರೆ=0 | ಹೇಳಿದರೆ =1, ಹೇಳದಿದ್ದರೆ=0 | 3=1, 3ಕ್ಕಿಂತ ಕಡಿಮೆ=0 | 5=1, 5ಕ್ಕಿಂತ ಕಡಿಮೆ=0 | ಸರಿಯಾಗಿ ತೋರಿಸಿದರೆ=1, ತೋರಿಸದಿದ್ದರೆ= 0 | | 3=1, 3ಕ್ಕಿಂತ ಕಡಿಮೆ=0 | | 3ಕ್ಕಿಂತ ಜಾಸ್ತಿ ಹೇಳಿದರೆ=1, 3ಕ್ಕಿಂತ ಕಡಿಮೆ ಹೇಳಿದರೆ=0 | | ಸರಿಯಾದ ಕ್ರಮದಲ್ಲಿ ಹೇಳಿದರೆ=1, ಹೇಳದಿದ್ದರೆ=0 |
| | | | | | | | | 37 | 38 | 39 | 40 | 41 | 42 | 43 | 44 | 45 | 46 | 47 | 48 |

| CID- ಮಗುವಿನ ಗುರುತು | ಮಗುವಿನ ಹೆಸರು | ತಂದೆಯ ಹೆಸರು | ತಾಯಿಯ ಹೆಸರು | ಲಿಂಗ | ಹುಟ್ಟಿದ ದಿನಾಂಕ | ಎತ್ತರ | ತೂಕ | ಶಿಕ್ಷಣ ಪೂರ್ವ ಗಣಿತ | | | |
|---|---|---|---|---|---|---|---|---|---|---|---|
| | | | | | | | | ಮಗು 1 ರಿಂದ 10 ರವರೆಗಿನ ಸಂಖ್ಯೆ ಹೇಳುವುದು | ಮಗು ಹೆಚ್ಚು ಕಡಿಮೆ ಹೇಳುವುದು (ಕಲಿಕಾ ಸಾಮಗ್ರಿ ಬಳಸಿ) | ಮಗು ದೊಡ್ಡದು–ಚಿಕ್ಕದು ಗುರುತಿಸುವುದು | ಮಗು ಹತ್ತಿರ–ದೂರ ಗುರುತಿಸುವುದು |
| | | | | | | | | ಹೇಳಿದರೆ=1, ಹೇಳದಿದ್ದರೆ=0 | | ಗುರುತಿಸಿದರೆ=1. ಗುರುತಿಸದಿದ್ದರೆ=0 | |
| | | | | | | | | 49 | 50 | 51 | 52 |

4 ರಿಂದ 6 ವರ್ಷದ ಮಕ್ಕಳ ಚಟುವಟಿಕೆ ಆಧಾರಿತ ಮೌಲ್ಯಮಾಪನದ ಮಾದರಿ ಪತ್ರಿಕೆ (ಕಾರ್ಯಕರ್ತೆಯರ ಪ್ರತಿ)

| CID ಮಗುವಿನ ಗುರುತು | ಮಗುವಿನ ಹೆಸರು | ತಂದೆಯ ಹೆಸರು | ತಾಯಿಯ ಹೆಸರು | ಲಿಂಗ | ಹುಟ್ಟಿದ ದಿನಾಂಕ | [illegible] | [illegible] | ಸಾಮಾನ್ಯ ಅರಿವು | | | | | | | |
|---|---|---|---|---|---|---|---|---|---|---|---|---|---|---|---|
| | | | | | | | | ಮಗು ತನ್ನ ಪೂರ್ತಿ ಹೆಸರು ಹೇಳುತ್ತದೆಯೇ | ಮಗು ತನ್ನ ವಯಸ್ಸು ಹೇಳುತ್ತದೆಯೇ | ನಿನ್ನ ಅಂಗನವಾಡಿಯ ಹೆಸರೇನು? | ನೀನು ಹುಡುಗನಾ? | ನೀನು ಹುಡುಗಿಯಾ? | ನಮ್ಮ ರಾಜ್ಯ ಯಾವುದು | ನಮ್ಮ ದೇಶ ಯಾವುದು | ಕುಟುಂಬ ಸದಸ್ಯರ ದೂರವಾಣಿ ಸಂಖ್ಯೆ ಅಥವಾ ಮನೆ ವಿಳಾಸ |
| | | | | | | | | ಹೌದು=1, ಇಲ್ಲ=0 | | ಸರಿಯಾಗಿ ಹೇಳಿದರೆ=1, ಹೇಳದಿದ್ದರೆ=0 | | | | | |
| | | | | | | | | 1 | 2 | 3 | 4 | 5 | 6 | 7 | 8 |

| CID ಮಗುವಿನ ಗುರುತು | ಮಗುವಿನ ಹೆಸರು | ತಂದೆಯ ಹೆಸರು | ತಾಯಿಯ ಹೆಸರು | ಲಿಂಗ | ಹುಟ್ಟಿದ ದಿನಾಂಕ | ವರ್ಷ | ತಿಂಗಳು | ಸೂಕ್ಷ್ಮ ಚಲನೆ | | | | |
|---|---|---|---|---|---|---|---|---|---|---|---|---|
| | | | | | | | | ಮಗು ಪೆನ್ಸಿಲ್ ಚೆನ್ನಾಗಿ ಹಿಡಿಯುವುದು (ಮುಕ್ತ ಚಟುವಟಿಕೆ ಹಾಳೆಯನ್ನು ಮಾಡುವಾಗ ಕಾರ್ಯಕರ್ತೆ ಗಮನಿಸುವುದು) | ಮಗು ಒತ್ತಿ ಬರೆಯುವುದು (ಮುಕ್ತ ಚಟುವಟಿಕೆ ಹಾಳೆಯನ್ನು ಮಾಡುವಾಗ ಕಾರ್ಯಕರ್ತೆ ಗಮನಿಸುವುದು) | ಆಕಾರದೊಳಗೆ ಬಣ್ಣ ಹಾಕುವುದು (ಚಟುವಟಿಕೆ ಸಂಖ್ಯೆ 11) | ಅಂಗಿಯ ಗುಂಡಿ ತೆಗೆಯುವುದು | ಅಂಗಿಯ ಗುಂಡಿ ಹಾಕುವುದು |
| | | | | | | | | ಹೌದು=1, ಇಲ್ಲ=0 | | 4=1, 4ಕ್ಕಿಂತ ಕಡಿಮೆ=0 | ಹೌದು=1, ಇಲ್ಲ=0 | |
| | | | | | | | | 9 | 10 | 11 | 12 | 13 |

| CID ಮಗುವಿನ ಗುರುತು | ಮಗುವಿನ ಹೆಸರು | ತಂದೆಯ ಹೆಸರು | ತಾಯಿಯ ಹೆಸರು | ಲಿಂಗ | ಹುಟ್ಟಿದ ದಿನಾಂಕ | ತರಗತಿ | ಶಾಲೆ | ಶಿಕ್ಷಣ ಪೂರ್ವ ಬರೆಯುವುದು | | | | | | | | |
|---|---|---|---|---|---|---|---|---|---|---|---|---|---|---|---|---|
| | | | | | | | | ಮಗು ಆಕಾರಗಳ ಮೇಲೆ ತಿದ್ದುವುದು (ಚಟುವಟಿಕೆ ಸಂಖ್ಯೆ 14) | ಮಗು ಆಕಾರಗಳನ್ನು ನಕಲು ಮಾಡುವುದು (ಚಟುವಟಿಕೆ ಸಂಖ್ಯೆ15) | ಮಗು ಅಕ್ಷರಗಳನ್ನು ತಿದ್ದುವುದು (ಚಟುವಟಿಕೆ ಸಂಖ್ಯೆ 16) | ಮಗು ಅಕ್ಷರಗಳನ್ನು ನಕಲು ಮಾಡುವುದು (ಚಟುವಟಿಕೆ ಸಂಖ್ಯೆ 17) | ಮಗು ಅಕ್ಷರಗಳನ್ನು ತಿದ್ದುವುದು (ಚಟುವಟಿಕೆ ಸಂಖ್ಯೆ 18) | ಮಗು ಅಕ್ಷರಗಳನ್ನು ನಕಲು ಮಾಡುವುದು (ಚಟುವಟಿಕೆ ಸಂಖ್ಯೆ 19) | ಮಗು ಸಂಖ್ಯೆಗಳನ್ನು ತಿದ್ದುವುದು (ಚಟುವಟಿಕೆಸಂಖ್ಯೆ 20) | ಮಗು ಸಂಖ್ಯೆಗಳನ್ನು ನಕಲು ಮಾಡುವುದು (ಚಟುವಟಿಕೆ ಸಂಖ್ಯೆ 21) | ಮಗು ತನ್ನ ಹೆಸರನ್ನು ಬರೆಯುವುದು (ಗಮನಿಸಿ) |
| | | | | | | | | 4=1, 4ಕ್ಕಿಂತ ಕಡಿಮೆ =0 | 3=1, 3ಕ್ಕಿಂತ ಕಡಿಮೆ=0 | | | | | | | ಹೆಸರು ಬರೆದರೆ=1, ಬರೆಯದಿದ್ದರೆ=0 |
| | | | | | | | | 14 | 15 | 16 | 17 | 18 | 19 | 20 | 21 | 22 |

| CID ಮಗುವಿನ ಗುರುತು | ಮಗುವಿನ ಹೆಸರು | ತಂದೆಯ ಹೆಸರು | ತಾಯಿಯ ಹೆಸರು | ಲಿಂಗ | ಹುಟ್ಟಿದ ದಿನಾಂಕ | ಎತ್ತರ | ತೂಕ | ಶಿಕ್ಷಣ ಪೂರ್ವ ಗಣಿತ | | | | | | | |
|---|---|---|---|---|---|---|---|---|---|---|---|---|---|---|---|
| | | | | | | | | ಮಗು 1–20 ರವರೆಗೆ ಸಂಖ್ಯೆ ಹೇಳುವುದು | ಅನುಕ್ರಮ ಜೋಡಣೆ ಮಾಡುವುದು (ದೊಡ್ಡದರಿಂದ ಚಿಕ್ಕದು/ಚಿಕ್ಕದರಿಂದ ದೊಡ್ಡದು) | ಯಾವುದರಲ್ಲಿ ಹೆಚ್ಚು ಮೀನುಗಳಿವೆ (ಚಟುವಟಿಕೆ ಸಂಖ್ಯೆ 25) | ಕಾರ್ಯಕರ್ತೆ ಹೇಳಿದ ಸಂಖ್ಯೆ ತೋರಿಸುವುದು (ಚಟುವಟಿಕೆ ಸಂಖ್ಯೆ 26) | 1–10 ರವರೆಗೆ ಸಂಖ್ಯೆ ಗುರುತಿಸುವುದು (ಚಟುವಟಿಕೆ ಸಂಖ್ಯೆ 27) | ಯಾವುದೇ 10 ವಸ್ತುಗಳನ್ನು ಎಣಿಸುವುದು | ಮಗು ಹೆಜ್ಜೆಯಿಂದ ಅಳತೆ ಮಾಡುವುದು | ಎಣಿಸಿ ಮೊತ್ತ ಬರೆಯಿರಿ (ಚಟುವಟಿಕೆ ಸಂಖ್ಯೆ 30) |
| | | | | | | | | 20 ರವರೆಗೆ ಹೇಳಿದರೆ=1, ಹೇಳದಿದ್ದರೆ =0 | ಹೌದು=1 , ಇಲ್ಲ=0 | ಸರಿ=1, ತಪ್ಪು=0 | ಕನಿಷ್ಠ 5 ಸಂಖ್ಯೆ ತೋರಿಸಿದರೆ=1, 5ಕ್ಕಿಂತ ಕಡಿಮೆ =0 | ಸರಿಯಾಗಿ ಗುರುತಿಸಿದರೆ=1, ಗುರುತಿಸದಿದ್ದರೆ=0 | ಎಣಿಸಿದರೆ=1, ಎಣಿಸದಿದ್ದರೆ= 0 | ಸರಿಯಾಗಿ ಅಳತೆ ಮಾಡಿದರೆ =1, ಮಾಡದಿದ್ದರೆ=0 | ಸರಿ=1, ತಪ್ಪು=0 |
| | | | | | | | | 23 | 24 | 25 | 26 | 27 | 28 | 29 | 30 |

| CID ಮಗುವಿನ ಗುರುತು | ಮಗುವಿನ ಹೆಸರು | ತಂದೆಯ ಹೆಸರು | ತಾಯಿಯ ಹೆಸರು | ಲಿಂಗ | ಹುಟ್ಟಿದ ದಿನಾಂಕ | ಎತ್ತರ | ತೂಕ | ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆ | | | | |
|---|---|---|---|---|---|---|---|---|---|---|---|---|
| | | | | | | | | ಮಗು ಆಟಿಕೆಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳುವುದು | ಮಗು ಸರದಿಗಾಗಿ ಕಾಯುವುದು | ಮಗು ಸ್ನೇಹಿತರನ್ನು ಮಾಡಿಕೊಳ್ಳುವುದು | ಮಗು ಕೇಂದ್ರದ ವಸ್ತುವನ್ನು ಜೋಪಾನ ಮಾಡುವುದು | ಮಗು ಕಾರ್ಯಕರ್ತೆಗೆ ಮತ್ತು ಸಹಾಯಕಿಗೆ ಸಹಾಯ ಮಾಡುವುದು |
| | | | | | | | | ಹೌದು=1, ಇಲ್ಲ=0 (ಕಾರ್ಯಕರ್ತೆ ಗಮನಿಸುವುದು) | | | | |
| | | | | | | | | 31 | 32 | 33 | 34 | 35 |

**ಅನುಕೂಲಕಾರರ ಪ್ರತಿ**

| | | | | | | | | ಸ್ಥೂಲ ಚಲನೆ | | | ಭಾಷಾ ಬೆಳವಣಿಗೆ | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| CID ಮಗುವಿನ ಗುರುತು | ಮಗುವಿನ ಹೆಸರು | ತಂದೆಯ ಹೆಸರು | ತಾಯಿಯ ಹೆಸರು | ಲಿಂಗ | ಹುಟ್ಟಿದ ದಿನಾಂಕ | ವರ್ಗ | ಜಾತಿ | ಚೆಂಡು ಎಸೆಯುವುದು | ಚೆಂಡು ಹಿಡಿಯುವುದು | ಒಂಟಿ ಕಾಲಿನಲ್ಲಿ ಕುಂಟುವುದು (ಗುಂಪು ಚಟುವಟಿಕೆ) (ಕನಿಷ್ಠ 5 ಹೆಜ್ಜೆ) | ಅಭಿನಯದೊಂದಿಗೆ ಶಿಶುಗೀತೆ ಹೇಳುವುದು | ಪ್ರಶ್ನೆಗೆ ವಾಕ್ಯದಲ್ಲಿ ಉತ್ತರಿಸುವುದು? ಕನಿಷ್ಠ 3 ಪ್ರಶ್ನೆ (ವಾರದ ವಿಷಯಕ್ಕೆ ಸಂಬಂಧಿಸಿದಂತೆ) | 3 ಸೂಚನೆಗಳನ್ನು ಸರಿಯಾದ ಕ್ರಮದಲ್ಲಿ ಪಾಲಿಸುತ್ತಾರೆ | 6 ಬಣ್ಣಗಳನ್ನು ಹೆಸರಿಸುತ್ತಾರೆ (ಕೆಂಪು, ನೀಲಿ,ಹಳದಿ, ಕಪ್ಪು, ಬಿಳಿ, ಹಸಿರು) | ಆಕಾರಗಳನ್ನು ಹೆಸರಿಸುವುದು (ತ್ರಿಭುಜ, ವೃತ್ತ, ಚೌಕ, ಆಯತ) (ಚಟುವಟಿಕೆ ಹಾಳೆ 11 ಉಪಯೋಗಿಸಿ) | 2 ಪ್ರಶ್ನೆಗಳಿಗೆ ಇಂಗ್ಲೀಷ್ ನಲ್ಲಿ ಉತ್ತರಿಸುವುದು. 1. What is you name? 2. How old are you? | ಮಗು ಎಡ ಬಲ ತೋರಿಸುವುದು | ಮಗು ಹಿಂದೆ ಮುಂದೆ ತೋರಿಸುವುದು | ಕಥೆ ಹೇಳುವುದು (4–5 ಸಾಲಿನ ಕಥೆ) | ವಾರದ ಹೆಸರು ಹೇಳುವುದು (ಅನುಕ್ರಮದಲ್ಲಿ ಹೇಳುವುದು) | ತಿಂಗಳ ಹೆಸರು ಹೇಳುವುದು (ಅನುಕ್ರಮದಲ್ಲಿ ಹೇಳುವುದು) |
| | | | | | | | | ಎಸೆದರೆ =1, ಎಸೆಯ ದಿದ್ದರೆ= 0 | ಹಿಡಿದರೆ= 1, ಹಿಡಿಯದಿ ದ್ದರೆ=0 | ಒಂಟಿ ಕಾಲಿನಲ್ಲಿ ಕುಂಟದರೆ= 1, ಕುಂಟದಿದ್ದರೆ =0 | ಅಭಿನಯ ದೊಂದಿಗೆ ಹೇಳಿದರೆ= 1, ಶಿಶುಗೀತೆ ಮಾತ್ರ ಹೇಳಿದರೆ= 0 | 3=1, 3ಕ್ಕಿಂತ ಕಡಿಮೆ=0 | | 6=1, 6ಕ್ಕಿಂತ ಕಡಿಮೆ =0 | 4 ಆಕಾರಗ ಳು=1, 4ಕ್ಕಿಂತ ಕಡಿಮೆ= 0 | 2=1, 2ಕ್ಕಿಂತ ಕಡಿಮೆ= 0 | ತೋರಿಸಿದರೆ= 1ತೋರಿಸದಿದ್ದ ರೆ=0 | | ಪೂರ್ತಿ ಕಥೆ ಹೇಳಿದರೆ =1, ಹೇಳದಿದ್ದ ರೆ=0 | ಪೂರ್ತಿ ಹೇಳಿದರೆ=1, ಹೇಳದಿದ್ದರೆ=0 | |
| | | | | | | | | 36 | 37 | 38 | 39 | 40 | 41 | 42 | 43 | 44 | 45 | 46 | 47 | 48 | 49 |

| | | | | | | | | ಗ್ರಹಣ ಶಕ್ತಿ ಬೆಳವಣಿಗೆ | | | ಶಿಕ್ಷಣ ಪೂರ್ವ ಓದುವುದು (ಇಂಗ್ಲೀಷ್) | | | | | ಶಿಕ್ಷಣ ಪೂರ್ವ ಓದುವುದು (ಕನ್ನಡ) | | | | |
|---|---|---|---|---|---|---|---|---|---|---|---|---|---|---|---|---|---|---|---|---|
| CID ಮಗುವಿನ ಗುರುತು | ಮಗುವಿನ ಹೆಸರು | ತಂದೆಯ ಹೆಸರು | ತಾಯಿಯ ಹೆಸರು | ಲಿಂಗ | ಹುಟ್ಟಿದ ದಿನಾಂಕ | ಎತ್ತರ | ತೂಕ | ಮಗು ವಸ್ತುಗಳನ್ನು ಬೇರ್ಪಡಿಸುವುದು (ಎಲೆ,ಕಲ್ಲು,ಬೀಜ) | 5 ವಸ್ತುಗಳ ಪುನರುಚ್ಛಾರಣೆ | ನನ್ನದಿನ ಮಿಂಚು ಪಟ್ಟಿಗಳನ್ನು ಅನುಕ್ರಮದಲ್ಲಿ ಜೋಡಿಸುವುದು | 5 ವಸ್ತುಗಳನ್ನು ಇಂಗ್ಲೀಷ್‌ನಲ್ಲಿ ಹೆಸರಿಸುತ್ತಾಳೆ/ನೆ (ವಿಷಯಕ್ಕೆ ಸಂಬಂದಿಸಿದಂತೆ) | A to Z ವರೆಗೆ ಹೇಳುವುದು | A to Z ವರೆಗೆ ಗುರುತಿಸುವುದು 5 ಮಿಂಚುಪಟ್ಟಿ ಉಪಯೋಗಿಸಿ | ಅಕ್ಷರದ ಶಬ್ಧಗಳನ್ನು ಸರಿಯಾಗಿ ಉಚ್ಛರಿಸುವುದು ಮಿಂಚುಪಟ್ಟಿ ಉಪಯೋಗಿಸಿ | ಚಿತ್ರವನ್ನು ಗುರುತಿಸಿ ಚಿತ್ರದ ಮೊದಲ ಅಕ್ಷರಕ್ಕೆ ಸರಿಯಾ ಹೊಂದಿಸುವುದು. | ಅ ಇಂದ ಳ ವರೆಗೆ ಹೇಳುತ್ತಾಳೆ/ನೆ | ಅ ಇಂದ ಳ ವರೆಗೆ ಗುರುತಿಸುತ್ತಾಳೆ/ನೆ | ಅಕ್ಷರದಿಂದ ಪ್ರಾರಂಭವಾಗುವ ಪದ ಹೇಳುತ್ತಾಳೆ/ನೆ | ಚಿತ್ರವನ್ನು ಗುರುತಿಸಿ, ಚಿತ್ರದ ಮೊದಲ ಅಕ್ಷರವನ್ನು ಸರಿಯಾಗಿ ಹೊಂದಿಸುವುದು (ಚಟುವಟಿಕೆ ಹಾಳೆ) | 3 ಸರಳ ಪದ ಓದುವುದು |
| | | | | | | | | ಬೇರ್ಪಡಿಸಿದರೆ=1, ಬೇರ್ಪಡಿಸದಿದ್ದರೆ=0 | 5 ವಸ್ತುಗಳು =1, 5ಕ್ಕಿಂತ ಕಡಿಮೆ=0 | ಜೋಡಿಸಿದರೆ =1, ಜೋಡಿಸದಿದ್ದರೆ=0 | 5=1, 5ಕ್ಕಿಂತ ಕಡಿಮೆ=0 | ಕನಿಷ್ಠ 3 ತಪ್ಪು ಉತ್ತರ ಇದ್ದರೆ=1, 3ಕ್ಕಿಂತ ಜಾಸ್ತಿ ಇದ್ದರೆ=0 | 10=1, 10 ಕ್ಕಿಂತ ಕಡಿಮೆ=0 | | 5=1, 5 ಕ್ಕಿಂತ ಕಡಿಮ =0 | ಹೌದು= 1. ಇಲ್ಲ=0 | 15 ಅಕ್ಷರ=1 15,ಕ್ಕಿಂತ ಕಡಿಮೆ=0 | | 5=1. 5ಕ್ಕಿಂತ ಕಡಿಮೆ =0 | 3=1, 3ಕ್ಕಿಂತ ಕಡಿಮೆ =0 |
| | | | | | | | | 50 | 51 | 52 | 53 | 54 | 55 | 56 | 57 | 58 | 59 | 60 | 61 | 62 |

# ಚಟುವಟಿಕೆ ಹಾಳೆ 4–6 ವರ್ಷ ಮಕ್ಕಳಿಗೆ

**ಮಗುವಿನ ಹೆಸರು.........................**

**ದಿನಾಂಕ---------------------**

11. ಚಟುವಟಿಕೆ ಸಂಖ್ಯೆ– 11 – ಈ ಕೆಳಗಿನ ಆಕಾರಗಳಿಗೆ ಬಣ್ಣ ಹಾಕುವುದು



14. ಚಟುವಟಿಕೆ ಸಂಖ್ಯೆ–14–ಆಕಾರಗಳ ಮೇಲೆ ತಿದ್ದುವುದು



15. ಚಟುವಟಿಕೆ ಸಂಖ್ಯೆ–15– ಆಕಾರಗಳನ್ನು ನಕಲು ಮಾಡುವುದು

 -------------  -----------------  ------------

16. ಚಟುವಟಿಕೆ ಸಂಖ್ಯೆ– 16– ಅಕ್ಷರಗಳನ್ನು ತಿದ್ದುವುದು





17. ಚಟುವಟಿಕೆ ಸಂಖ್ಯೆ– 17– ಅಕ್ಷರಗಳನ್ನು ನಕಲು ಮಾಡುವುದು

# ರ......... ಊ ......... ನ .........

18. ಚಟುವಟಿಕೆ ಸಂಖ್ಯೆ– 18– ಅಕ್ಷರಗಳನ್ನು ತಿದ್ದುವುದು



19. ಚಟುವಟಿಕೆ ಸಂಖ್ಯೆ–19–ಅಕ್ಷರಗಳನ್ನು ನಕಲು ಮಾಡುವುದು

# b......   u.......   y......

20. ಚಟುವಟಿಕೆ ಸಂಖ್ಯೆ–20– ಸಂಖ್ಯೆಗಳನ್ನು ತಿದ್ದುವುದು



21. ಚಟುವಟಿಕೆ ಸಂಖ್ಯೆ–21–ಸಂಖ್ಯೆಗಳನ್ನು ನಕಲು ಮಾಡುವುದು

# 3...... 7...... 9......

25. ಚಟುವಟಿಕೆ ಸಂಖ್ಯೆ– 25 – ಯಾವುದರಲ್ಲಿ ಹೆಚ್ಚು ಮೀನುಗಳಿವೆ ✓ ಗುರುತು ಹಾಕಿ



26. ಚಟುವಟಿಕೆ ಸಂಖ್ಯೆ–26–ಕಾರ್ಯಕರ್ತೆ ಹೇಳಿದ ಸಂಖ್ಯೆಯನ್ನು ಮಗು ತೋರಿಸುವುದು

# 1 2 4 6 8 9 3 5 7 10

27. ಚಟುವಟಿಕೆ ಸಂಖ್ಯೆ– 27 –ಮಗು 1–10 ರವರೆಗೆ ಸಂಖ್ಯೆ ಗುರುತಿಸುವುದು

# 1 4 2 6 8 7 9 3 10 5

30. ಚಟುವಟಿಕೆ ಸಂಖ್ಯೆ– 30– ಚಿತ್ರದಲ್ಲಿರುವ ನಕ್ಷತ್ರಗಳನ್ನು ಎಣಿಸಿ ಮೊತ್ತವನ್ನು ಬರೆಯಿರಿ




57. ಕೆಳಗೆ ಕೊಟ್ಟಿರುವ ಚಿತ್ರದ ಹೆಸರು ಹೇಳಿ, ಆ ಚಿತ್ರದ ಮೊದಲ ಅಕ್ಷರವನ್ನು ಗುರುತಿಸಿ ಗೆರೆ ಎಳೆಯಿರಿ.



**m**



**b**



**u**



**k**



**f**

61. ಕೆಳಗೆ ಕೊಟ್ಟಿರುವ ಚಿತ್ರದ ಹೆಸರು ಹೇಳಿ, ಆ ಚಿತ್ರದ ಮೊದಲ ಅಕ್ಷರವನ್ನು ಗುರುತಿಸಿ ಗೆರೆ ಎಳೆಯಿರಿ.



ಕ



ಲ



ಚ



ಎ



ಆ

ಅಕ್ಷರ ಫೌಂಡೇಶನ್
ನಂ. 621, 5ನೇ ಮುಖ್ಯರಸ್ತೆ,
ಓ.ಎಂ.ಬಿ.ಆರ್ ಬಡಾವಣೆ, ಬಾಣಸವಾಡಿ,
ಬೆಂಗಳೂರು – 560 043
www.akshara.org.in